ಸಂಪುಟ : 11 ಸಂಚಿಕೆ: 56 ಪುಟ : 4+2 ಬೆಲೆ: 3.00 ಮಂಗಳವಾರ ಮಾರ್ಚ್ 31 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 56 Pages : 4+2 Price : 3.00 Tuesday March 31 2026 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಇಂದು



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿಣಿ ಸಭೆಯನ್ನು ಮಾರ್ಚ್ 31ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ನಗರದ ಕಾಟನ್ ಸೆಲ್ ಸೊಸೈಟಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಕೃಷ್ಣಗೌಡ ಎಚ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಯಲ್ಲಿ ಜಿಲ್ಲಾ ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಅಸೆಂಬ್ಲಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಬ್ಲಾಕ್ ಅಧ್ಯಕ್ಷರು ಮತ್ತು ಎಲ್ಲಾ ಪದಾಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕೆಂದು ಸೂಚಿಸಲಾಗಿದೆ.

ಈ ಕುರಿತು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಕೃಷ್ಣಗೌಡ ಎಚ್. ಪಾಟೀಲ ಹಾಗೂ ಗದಗ-ಬೆಟಗೇರಿ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಅನ್ವರ್ ಕೆ. ನದಾಫ್ ಅವರು ಪತ್ರಿಕಾ ಪ್ರಕಟಣೆಯ ಮೂಲಕ ಮನವಿ ಮಾಡಿದ್ದಾರೆ.

### ಹಾನಿ ಪರಿಶೀಲನೆ, ತುರ್ತು ನೆರವು ವಿತರಣೆ–ಜಾನುವಾರು ನಷ್ಟಕ್ಕೆ ಪರಿಹಾರ ಚೆಕ್

# ಆಲಿಕಲ್ಲು ಮಳೆಗೆ ತತ್ತರಿಸಿದ ಮಾಚಾಪುರ ಗ್ರಾಮಕ್ಕೆ ಸಚಿವ ಲಾಡ್ ಭೇಟಿ





**■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಕಲಘಟಗಿ ತಾಲ್ಲೂಕಿನ ಮಾಚಾಪುರ ಗ್ರಾಮದಲ್ಲಿ ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆಯಿಂದ ಉಂಟಾದ ಹಾನಿಯನ್ನು ಪರಿಶೀಲಿಸಲು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಗ್ರಾಮಕ್ಕೆ ಭೇಟಿ ನೀಡಿದರು.

ಹಾನಿಗೊಂಡ ಮನೆಗಳು ಹಾಗೂ ಹೊಲಗಳಿಗೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಚರ್ಚೆ ನಡೆಸಿದ ಅವರು, ಸಂಕಷ್ಟದ ಈ ಸಂದರ್ಭದಲ್ಲಿ ಜಿಲ್ಲಾಡಳಿತ ಹಾಗೂ ಸರ್ಕಾರ ಗ್ರಾಮಸ್ಥರ ಜೊತೆ ನಿಂತಿದೆ ಎಂಬ ಭರವಸೆ ನೀಡಿದರು. ತುರ್ತು ನೆರವಿನ ಭಾಗವಾಗಿ, ಹಾನಿಗೊಂಡ ಮನೆಗಳಿಗೆ ತಾತ್ಕಾಲಿಕ ವಾಸ ವ್ಯವಸ್ಥೆ ಕಲ್ಪಿಸಲು ಸಂತೋಷ್ ಲಾಡ್ ಫೌಂಡೇಶನ್ ಮೂಲಕ 50,000 ಮೇಲ್ಹಾವಣಿ ಹಂಚುಗಳನ್ನು ವಿತರಿಸಲಾಯಿತು.

ಮಳೆಯಿಂದ ಜಾನುವಾರುಗಳ ಪ್ರಾಣಹಾನಿ ಸಂಭವಿಸಿದ ಹಿನ್ನೆಲೆ ಫಲಾನುಭವಿಗಳಾದ ಕಲ್ಲಪ್ಪ ಬಸವಂತಪ್ಪ ಹುರಕಡ್ಲಿ, ನಿಂಗಪ್ಪ ತಿಪ್ಪಣ್ಣ ರಾಮನಕೊಪ್ಪ ಹಾಗೂ ನಾಗಪ್ಪ ಫಕ್ಕೀರಪ್ಪ ಇಂದೂರ ಅವರಿಗೆ ತಲಾ 20,000 ರೂ. ಪರಿಹಾರದ ಚೆಕ್‌ಗಳನ್ನು ಸ್ಥಳದಲ್ಲೇ ವಿತರಿಸಲಾಯಿತು.

ಸಚಿವರು ಬೆಳೆಹಾನಿಗೊಳಗಾದ ರೈತರ ಜಮೀನುಗಳಿಗೆ ಭೇಟಿ ನೀಡಿ ಕಬ್ಬು, ಜೋಳ, ಮಾವು ಸೇರಿದಂತೆ ವಿವಿಧ ಬೆಳೆಗಳ ಹಾನಿಯನ್ನು ಪರಿಶೀಲಿಸಿದರು. ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸಮಗ್ರ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸ್ನೇಹಲ್ ಆರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

> "ಸಂಕಷ್ಟದ ಸಂದರ್ಭದಲ್ಲಿ ಸರ್ಕಾರ ನಿಮ್ಮ ಜೊತೆಗಿದೆ. ಯಾರಿಗೂ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳುತ್ತೇವೆ."
> – **ಸಂತೋಷ್ ಲಾಡ್**, ಕಾರ್ಮಿಕ ಸಚಿವ

## ಶ್ರದ್ಧಾಭಕ್ತಿಯಿಂದ ಕೋಟೆ ವೀರಭದ್ರೇಶ್ವರ ರಥೋತ್ಸವ



**■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

101 ಗುಡಿ, ಭಾವಿಗಳ ಐತಿಹಾಸಿಕ ವೈಭವ ಹೊಂದಿರುವ ಲಕ್ಕುಂಡಿಯಲ್ಲಿ ಕೋಟೆ ವೀರಭದ್ರೇಶ್ವರ ರಥೋತ್ಸವವು ಸೋಮವಾರ ಸಂಜೆ ಸಾವಿರಾರು ಭಕ್ತರ ನಡುವೆ ಶ್ರದ್ಧಾಭಕ್ತಿಯಿಂದ ಜರುಗಿತು.

ಸಂಜೆ 5 ಗಂಟೆಗೆ ಡೋಣಿಯ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿಗಳು, ಹರ್ಲಾಪೂರದ ಡಾ. ಕೊಟ್ಟೂರೇಶ್ವರ ಸ್ವಾಮೀಜಿಗಳು ಹಾಗೂ ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿಗಳು ವಿಧಿ ವಿಧಾನಗಳೊಂದಿಗೆ ರಥ–ಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವದಲ್ಲಿ ಕೋಟೆ ವೀರಭದ್ರೇಶ್ವರ ಯುವಕ ಮಂಡಳದ ನಂದಿಕೋಲ ಸಮ್ಮಾಳ ಮೇಳದ ಕುಣಿತ ಭಕ್ತರ ಗಮನ ಸೆಳೆಯಿತು. ಭಕ್ತರು "ಹರ ಹರ ಮಹಾದೇವ" ಹಾಗೂ "ಕೋಟೆ ವೀರಭದ್ರೇಶ್ವರ ಮಹಾರಾಜ ಕೀ ಜೈ" ಎಂಬ ಘೋಷಣೆಗಳೊಂದಿಗೆ ರಥವನ್ನು ಎಳೆದರು. ಉತ್ತತ್ತಿಗಳನ್ನು ರಥ–ಕ್ಕೆ ಅರ್ಪಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ದಾನ ಚಿಂತಾಮಣಿ ಅತ್ತಿಮಬ್ಬೆ ಮಹಾದ್ವಾರದವರೆಗೆ ಸಾಗಿದ ತೆ–ೇರು, ಬಳಿಕ ಸಂಪ್ರದಾಯದಂತೆ ಹತ್ತಿರದ ಹನುಮನ ಭಾವಿಗೆ ತೆರಳಿ ಪೂಜೆ ಸಲ್ಲಿಸಲಾಯಿತು.

ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು ಈ ವೈಭವದ ರಥೋತ್ಸವಕ್ಕೆ ಸಾಕ್ಷಿಯಾದರು.

ಇದಕ್ಕೂ ಮೊದಲು ಬೆಳಿಗ್ಗೆ ವೀರಭದ್ರೇಶ್ವರ ಮೂರ್ತಿಗೆ ವಿವಿಧ ಹೂವಿನ ಅಲಂಕಾರ ಮಾಡಲಾಗಿದ್ದು, ರುದ್ರಾಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ಭಕ್ತರು ನೈವೇದ್ಯ ಅರ್ಪಿಸಿ ತಮ್ಮ ಸಂಕಲ್ಪಗಳನ್ನು ಸಲ್ಲಿಸಿದರು.

### ಗಜೇಂದ್ರಗಡದಲ್ಲಿ ವಿಶ್ರಾಂತಿ ಗೃಹ ಹಾಗೂ ಹೊಸ ವಾಹನಗಳ ಉದ್ಘಾಟಿಸಿದ ಶಾಸಕ ಜಿ.ಎಸ್. ಪಾಟೀಲ

# ಪೌರಕಾರ್ಮಿಕರ ಸೇವೆ ಅಮೂಲ್ಯ



**■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ**

ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಹಾಗೂ ಜನರ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಶಾಸಕ ಜಿ.ಎಸ್. ಪಾಟೀಲ್ ಹೇಳಿದರು.

ಪಟ್ಟಣದ ಪುರಸಭೆ ವತಿಯಿಂದ ನೂತನವಾಗಿ ನಿರ್ಮಿಸಲಾದ ಪೌರಕಾರ್ಮಿಕರ ವಿಶ್ರಾಂತಿ ಗೃಹ ಹಾಗೂ ಹೊಸ ವಾಹನಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

> "ನಗರದ ಸ್ವಚ್ಛತೆ ಮತ್ತು ಸಾರ್ವಜನಿಕರ ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಅಮೂಲ್ಯ."
> **– ಜಿ.ಎಸ್. ಪಾಟೀಲ, ಶಾಸಕರು.**

ನಗರದ ಸ್ವಚ್ಛತೆ ಕಾಪಾಡುವಲ್ಲಿ ಪೌರಕಾರ್ಮಿಕರು ಪ್ರಮುಖ ಪಾತ್ರವಹಿಸುತ್ತಿದ್ದು, ಅವರ ಕೆಲಸದ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ವಿಶ್ರಾಂತಿ ಗೃಹವನ್ನು ನಿರ್ಮಿಸಲಾಗಿದೆ. ಈ ಗೃಹದಲ್ಲಿ ಕುಡಿಯುವ ನೀರು, ವಿಶ್ರಾಂತಿ ಕೊಠಡಿ ಹಾಗೂ ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಇದರಿಂದ ಕಾರ್ಮಿಕರಿಗೆ ಕೆಲಸದ ಮಧ್ಯೆ ವಿಶ್ರಾಂತಿ ಪಡೆಯಲು ಅನುಕೂಲವಾಗಲಿದೆ ಎಂದು ಹೇಳಿದರು.

ಇದೇ ವೇಳೆ, ಪುರಸಭೆಗೆ ಹೊಸದಾಗಿ ಸೇರ್ಪಡೆಯಾದ ವಾಹನಗಳನ್ನು ಉದ್ಘಾಟಿಸಲಾಗಿದ್ದು, ಕಸ ಸಂಗ್ರಹಣೆ ಮತ್ತು ಸಾಗಣೆ ಕಾರ್ಯಗಳು ಇನ್ನಷ್ಟು ಸುಗಮವಾಗಲಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುಭಾಸ್ ಮ್ಯಾಗೇರಿ, ಶಿವರಾಜ ಘೋರ್ಪಡೆ, ಸಿದ್ದಣ್ಣ ಬಂಡಿ, ಮುರ್ತುಜಾ ಡಾಲಾಯತ್, ಮುದಿಯಪ್ಪ ಮುಧೋಳ, ರಾಜು ಸಾಂಗ್ಲಿಕರ್, ಆರ್.ಎಂ. ರಾಯಬಾಗಿ, ಮಂಜುಳಾ ರೇವಡಿ, ಶಾರದಾ ರಾಠೋಡ ಸೇರಿದಂತೆ ಅಧಿಕಾರಿಗಳು ಹಾಗೂ ಪೌರಕಾರ್ಮಿಕರು ಉಪಸ್ಥಿತರಿದ್ದರು.

### ವ್ಯಸನಮುಕ್ತ ಜಾಗೃತಿ ಜಾಥಾಕ್ಕೆ ತೋಂಟದ ಶ್ರೀಗಳಿಂದ ಚಾಲನೆ

## ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಮುಂದಾಗಬೇಕು

**■ವಿಜಯಸಾಕ್ಷಿ ಸುದ್ದಿ, ಗದಗ**

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಬದ್ಧತೆಯಿಂದ ಮುಂದಾಗಬೇಕು ಎಂದು ಜ.ಡಾ. ತೋಂಟದ ಸಿದ್ಧರಾಮ ಸ್ವಾಮಿಗಳು ಕರೆ ನೀಡಿದರು.


ಜ.ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಗದಗ ಐಎಂಎ, ನಿಮಾ, ಆಯುರ್ವೇದಿಕ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ, ಅಲೋಪತಿಕ ಹಾಗೂ ಆಯುರ್ವೇದ ವೈದ್ಯರಿಂದ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಮುನ್ನ ವ್ಯಸನಮುಕ್ತ ಜಾಗೃತಿ ಜಾಥಾಕ್ಕೆ ತೋಂಟದಾರ್ಯ ಮಠದ ಎದುರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಮದ್ಯಪಾನ, ಧೂಮ್ರಪಾನ, ತಂಬಾಕು, ಗುಟ್ಕಾ ಸೇವನೆ ಸೇರಿದಂತೆ ಮುಂತಾದ ವ್ಯಸನಗಳಿಂದ ಜನತೆ ತಮ್ಮ ಆರೋಗ್ಯ, ಹಣ, ಆಯುಷ್ಯವನ್ನು ಕಳೆದುಕೊಳ್ಳುವ ಮೂಲಕ ಕುಟುಂಬದ ನೆಮ್ಮದಿಯನ್ನು ಭಗ್ನ ಮಾಡುತ್ತಿದ್ದಾರೆ. ವಿಶೇಷವಾಗಿ ಯುವ ಜನಾಂಗ ನಶೆ ಬರುವಂತಹ ಉತ್ಪನ್ನಗಳಿಗೆ ಹೆಚ್ಚು ಆಕರ್ಷಿತರಾಗಿ ತಮ್ಮ ಜೀವವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದರು.

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ▶▶3ನೇ ಪುಟಕ್ಕೆ



### ಏ.5ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು– ರಾಜ್ಯಾದ್ಯಂತ ಭಕ್ತರ ಆಗಮನ ನಿರೀಕ್ಷೆ!

## ಇಂದಿನಿಂದ ಹಿಂದೂ–ಮುಸ್ಲಿಂ ಭಾವೈಕ್ಯತೆಯ ದೂದಪೀರಾಂ ಉರುಸು ಆರಂಭ







**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಹಿಂದೂ–ಮುಸ್ಲಿಂ ಭಾವೈಕ್ಯತೆಯ ಕೇಂದ್ರವಾಗಿರುವ ಲಕ್ಷ್ಮೇಶ್ವರದಲ್ಲಿ ಸೂಫಿ ಸಂತ ಹಜರತ್ ದೂದಪೀರಾಂ ಅವರ 137ನೇ ಉರುಸು ಕಾರ್ಯಕ್ರಮ ಮಾ.31ರಿಂದ ಎಪ್ರಿಲ್ 5ರವರೆಗೆ ನಡೆಯಲಿದೆ ಎಂದು ದರ್ಗಾ ಕಮಿಟಿ ಅಧ್ಯಕ್ಷ ಸುಲೇಮಾನಸಾಬ ಕಣಿಕೆ ತಿಳಿಸಿದ್ದಾರೆ.

ದರ್ಗಾದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾ.31ರಂದು ಮಂಗಳವಾರ ರಾತ್ರಿ 9 ಗಂಟೆಗೆ ಫುಕ್ರಾಗಳು, ಜರಬ್, ಜೂಲುಸ್‌ಗಳೊಂದಿಗೆ ಗಂಧ ಕಾರ್ಯಕ್ರಮ ನೆರವೇರಲಿದೆ ಎಂದರು.

ಎಪ್ರಿಲ್ 1ರಂದು ರಾತ್ರಿ 9ರಿಂದ ಬೆಳಗ್ಗೆ 7ರವರೆಗೆ ಪ್ರಸಿದ್ಧ ಬ್ಯಾಂಡ್ ಕಂಪನಿಗಳೊಂದಿಗೆ ತಾಜಮಹಲ್ ಮೆರವಣಿಗೆ ನಂತರ ಗಲೀಫ್ ಕಾರ್ಯಕ್ರಮ ನಡೆಯಲಿದೆ. ಎಪ್ರಿಲ್ 4ರಂದು ಉತ್ತರ ಪ್ರದೇಶದ ಕಿಚೋಚಾ ಶರೀಫ್‌ನ ಹಜರತ್ ಅಲ್ಲಾಮ ಮೌಲಾನಾ ಹಾಶ್ಮೀಮಿಯ್ಯಾ ಅಶ್ರಫಿ ಹಾಗೂ ಅವರ ಪುತ್ರ ಮುಯೀಜ್ ಅಶ್ರಫಿ ಅವರಿಂದ ವಾಜ್ ಬಯಾನ್ ನಡೆಯಲಿದೆ. ಎಪ್ರಿಲ್ 5ರಂದು ಮುಂಬಯಿ ಇಪ್ತೆಕಾರಿ ಸಹೋದರರು ಮತ್ತು ಸೂಫಿ ಮುಜ್ತಭಾ ಅಜೀಜ್ ನಾಜಾ ಅವರಿಂದ ಖವ್ವಾಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ದರ್ಗಾ ಕಮಿಟಿ ಕಾರ್ಯದರ್ಶಿ ಸಾಹಬಜಾನ್‌ಸಾಬ ಹವಾಲ್ದಾರ ಮಾತನಾಡಿ, ನೂರಾರು ವರ್ಷಗಳಿಂದ ಹಿಂದೂ–ಮುಸ್ಲಿಂ ಬಾಂಧವರು ದೂದನಾನಾರವರ ದರ್ಗಾಕ್ಕೆ ಶ್ರದ್ಧಾಭಕ್ತಿಯಿಂದ ಆಗಮಿಸುತ್ತಿದ್ದಾರೆ. ಉರುಸು ಹಿನ್ನೆಲೆಯಲ್ಲಿ ಕುಡಿಯುವ ನೀರು, ಸ್ವಚ್ಛತೆ, ಶೌಚಾಲಯ, ಪಾರ್ಕಿಂಗ್ ಸೇರಿದಂತೆ ಮೂಲಭೂತ ಸೌಲಭ್ಯಗಳ ಜೊತೆಗೆ ತುರ್ತು ಆರೋಗ್ಯ ಸೇವೆಗೆ ವೈದ್ಯಕೀಯ ಹಾಗೂ ಅಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಪೊಲೀಸ್, ಪುರಸಭೆ, ಆರೋಗ್ಯ ಮತ್ತು ಸಾರಿಗೆ ಇಲಾಖೆಗಳ ಸಹಕಾರದೊಂದಿಗೆ ಪ್ರತಿವರ್ಷದಂತೆ ಈ ವರ್ಷವೂ ಉರುಸು ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸಲಾಗುತ್ತದೆ ಎಂದರು.

ಸಮಾಜದ ಹಿರಿಯ ಮುಖಂಡ ದಾದಾಪೀರ ಮುಚ್ಚಾಲೆ ಮಾತನಾಡಿ, ದೂದಪೀರಾಂ ದರ್ಗಾ ಭಾವೈಕ್ಯತೆಯನ್ನು ಸಾರುವ ಶಕ್ತಿ ಕೇಂದ್ರವಾಗಿದ್ದು, ದೇಶದಾದ್ಯಂತ ಭಕ್ತರ ನಂಬಿಕೆ ಗಳಿಸಿದೆ. ಭಕ್ತರ ಸಹಕಾರದಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ದರ್ಗಾ ಕಮಿಟಿಯ ಉಪಾಧ್ಯಕ್ಷ ಇರ್ಫಾನಬೇಗ ಮಿರ್ಜಾ, ದಾದಾಪೀರ ಕಾರಡಗಿ, ನೂರ ಅಹ್ಮದ ಸಿದ್ದಿ, ಖಲಂದರ ಸೂರಣಗಿ, ಫಹೀಮ ಮುಲ್ಲಾ, ಸಾಧಿಕ ಶಮಲೇವಾಲೆ, ರಫೀಕ ಸಿದ್ದಾಪುರ, ಅಕ್ಬರಬಾಷಾ ಸೂರಣಗಿ, ಮೆಹಬೂಬಸಾಬ ಮುಳಗುಂದ, ದಾದಾಪೀರ ಜಮಖಂಡಿ ಸೇರಿದಂತೆ ಕಮಿಟಿ ಸದಸ್ಯರು ಮತ್ತು ಹಿರಿಯರು ಉಪಸ್ಥಿತರಿದ್ದರು.

# ಶಾಸಕರಿಗೆ ಉಚಿತ ಐಪಿಎಲ್ ಟಿಕೆಟ್: ತಾಳಿಕೋಟಿ ಖಂಡನೆ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಶಾಸಕರಿಗೆ ಉಚಿತ ಐಪಿಎಲ್ ಟಿಕೆಟ್ ನೀಡಲು ಸರ್ಕಾರ ಮುಂದಾಗಿರುವುದನ್ನು CPI(M) ಶಾಖಾ ಕಾರ್ಯದರ್ಶಿ ದಾವಲಸಾಬ ತಾಳಿಕೋಟಿ ತೀವ್ರವಾಗಿ ಖಂಡಿಸಿದ್ದಾರೆ.



ಜನರ ಸಮಸ್ಯೆಗಳು ಬಾಕಿ ಉಳಿದಿರುವಾಗ ಶಾಸಕರ ಸೌಲಭ್ಯಗಳಿಗೆ ತ್ವರಿತ ನಿರ್ಧಾರ ಕೈಗೊಳ್ಳುವುದು ಅಸಮಂಜಸ ಎಂದು ಅವರು ತಿಳಿಸಿದ್ದಾರೆ. ಮಾಧ್ಯಮ ವರದಿ ಪ್ರಕಾರ ಶಾಸಕರಿಗೆ ಟಿಕೆಟ್ ಹಾಗೂ ಪಾಸ್‌ಗಳನ್ನು ನೀಡುವ ನಿರ್ಧಾರ "ವಿಐಪಿ ಸಂಸ್ಕೃತಿ"ಗೆ ಉತ್ತೇಜನವಾಗಿದೆ ಎಂದು ಆರೋಪಿಸಿದರು.

ಅಪಘಾತ ಪರಿಹಾರ, ಪಿಂಚಣಿ, ಆಶಾ-ಅಂಗನವಾಡಿ ಸಿಬ್ಬಂದಿ ಸಂಬಳ ಹೆಚ್ಚಳಕ್ಕೆ ಸ್ಪಂದಿಸದ ಸರ್ಕಾರ, ಶಾಸಕರ ಸೌಲಭ್ಯಕ್ಕೆ ತುದಿಗಾಲ ಮೇಲೆ ನಿಂತಿರುವುದು ಖಂಡನೀಯ ಎಂದರು.

ಶಾಸಕರು ಸ್ವಂತವಾಗಿ ಟಿಕೆಟ್ ಖರೀದಿ ಮಾಡಬಹುದು, ಸಾರ್ವಜನಿಕ ಹಣದಲ್ಲಿ ಉಚಿತವಾಗಿ ನೀಡುವುದು ಸರಿಯಲ್ಲ ಎಂದು ತಾಳಿಕೋಟಿ ಒತ್ತಾಯಿಸಿದರು.

# ಹಸಿವು ನೀಗಿಸುವ ಹೃದಯ: ಗಂಗಾಧರಯ್ಯನವರ ದಾಸೋಹ ಸೇವೆಗೆ ಒಂದು ವರ್ಷ

## ಹಗರಿಬೊಮ್ಮನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಪ್ರತಿದಿನ 130ಕ್ಕೂ ಹೆಚ್ಚು ರೋಗಿಗಳಿಗೆ ಉಚಿತ ಉಪಹಾರ - ಕುಟುಂಬ, ಸ್ನೇಹಿತರ ಸಹಕಾರದಿಂದ ಮಾನವೀಯ ಕಾರ್ಯ

ಸಮಾಜದಲ್ಲಿ ಸೇವೆ ಮಾಡುವ ಮನಸ್ಸಿದ್ದರೆ ದೊಡ್ಡ ಹುದ್ದೆ ಅಥವಾ ಸಂಪತ್ತು ಬೇಕಾಗುವುದಿಲ್ಲ ಎಂಬುದನ್ನು ಹಗರಿಬೊಮ್ಮನಹಳ್ಳಿಯ ದರ್ಶನ್ ಹೋಟೆಲ್ ಮಾಲೀಕ ಎಸ್. ಎಂ. ಗಂಗಾಧರಯ್ಯ ಅವರು ಸಾಬೀತುಪಡಿಸಿದ್ದಾರೆ.

ಕಳೆದ ಒಂದು ವರ್ಷದಿಂದ ಹಗರಿಬೊಮ್ಮನಹಳ್ಳಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಪ್ರತಿದಿನ ಉಚಿತ ಉಪಹಾರ ನೀಡುವ ಮೂಲಕ ಅವರು ಮಾನವೀಯತೆ ಮೆರೆದಿದ್ದು, ಈ ಸೇವೆ ಇದೀಗ 365 ದಿನಗಳನ್ನು ಪೂರೈಸಿ ಹೊಸ ಮೈಲುಗಲ್ಲು ಸಾಧಿಸಿದೆ.

ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಗಂಗಾಧರಯ್ಯ ಅವರು ವಿದ್ಯಾಭ್ಯಾಸದ



ನಂತರ ಸರ್ಕಾರಿ ಉದ್ಯೋಗದ ಕನಸು ಕಂಡರೂ, ತಂದೆಯ ನಿಧನದ ನಂತರ ಕುಟುಂಬದ ಹೊಣೆ ಹೊತ್ತು ಹೋಟೆಲ್ ವೃತ್ತಿಗೆ ಮರಳಿದರು. ತಾಯಿಯವರಾದ ಗೌರಮ್ಮ ಅವರ ಮಾರ್ಗದರ್ಶನದಲ್ಲಿ ಹೋಟೆಲ್ ಮುಂದುವರೆಸಿ, ಅದನ್ನು ಯಶಸ್ವಿ ಉದ್ಯಮವನ್ನಾಗಿ ರೂಪಿಸಿದರು.

ತಮ್ಮ ಮಗನ ಹೆಸರಿನಲ್ಲಿ "ದರ್ಶನ್ ಹೋಟೆಲ್" ಆರಂಭಿಸಿದ ಅವರು, ಅದನ್ನು ಕೇವಲ ವ್ಯಾಪಾರವಾಗಿ ಮಾತ್ರವಲ್ಲದೆ ಸಮಾಜ ಸೇವೆಯ ವೇದಿಕೆಯಾಗಿಯೂ ಬಳಸಿಕೊಂಡಿದ್ದಾರೆ.

ಸಾಮೂಹಿಕ ವಿವಾಹಗಳಿಗೆ ನೆರವು, ಬಡ ವಿದ್ಯಾರ್ಥಿಗಳಿಗೆ ಸಹಾಯ, ಮಠ-ಮಂದಿರಗಳಿಗೆ ದಾನ, ಜಾತ್ರಾ ಸಂದರ್ಭದಲ್ಲಿ ಅನ್ನಸಂತರ್ಪಣೆ- ಇಂತಹ ಅನೇಕ ಸೇವೆಗಳ ನಡುವೆ, ಆಸ್ಪತ್ರೆಯ ಒಳರೋಗಿಗಳಿಗೆ ಉಚಿತ ಉಪಹಾರ ನೀಡುವ ಕಾರ್ಯವು ವಿಶೇಷವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

> "ಬಡವರ ನೋವು ನೋಡಿದಾಗ ಮನಸ್ಸು ನಿಲ್ಲುವುದಿಲ್ಲ ನಾವು ಗಳಿಸಿದದಲ್ಲೊಂದು ಭಾಗ ಅವರನ್ನು ತಲುಪಿದಾಗಲೇ ಬದುಕಿಗೆ ಅರ್ಥ ಸಿಗುತ್ತದೆ."
>
> **- ಎಸ್.ಎಂ. ಗಂಗಾಧರಯ್ಯ, ಹೋಟೆಲ್ ಮಾಲಿಕರು.**

ಪ್ರತಿದಿನ ಸಂಜೆ 7:30ಕ್ಕೆ ಸುಮಾರು 130 ರಿಂದ 150 ರೋಗಿಗಳಿಗೆ ಉಪಹಾರ ನೀಡುತ್ತಿರುವ ಈ ಸೇವೆಯಲ್ಲಿ ಅವರ ಪತ್ನಿ ಅಂಬುಜಮ್ಮ ಅವರು ಪ್ರಮುಖ ಪಾತ್ರವಹಿಸಿದ್ದಾರೆ. ಸ್ನೇಹಿತರು ಮತ್ತು ಹೋಟೆಲ್ ಸಿಬ್ಬಂದಿಯ ಸಹಕಾರದಿಂದ ಈ ಕಾರ್ಯ ನಿರಂತರವಾಗಿ ಸಾಗುತ್ತಿದೆ.

ಇವರ ಪುತ್ರರಾದ ದರ್ಶನ್ ಸ್ವಾಮಿ ವೈದ್ಯಕೀಯ ಶಿಕ್ಷಣ ಮತ್ತು ಗಣೇಶ್ ಸ್ವಾಮಿ ಇಂಜಿನಿಯರಿಂಗ್ ಶಿಕ್ಷಣ ಪಡೆದುಕೊಳ್ಳುತ್ತಿದ್ದು, ಕುಟುಂಬದ ಸೇವಾ ಪರಂಪರೆಯನ್ನು ಮುಂದುವರೆಸುವ ಭರವಸೆ ನೀಡುತ್ತಿದ್ದಾರೆ.

ಗಂಗಾಧರಯ್ಯ ಅವರ ಈ ನಿಸ್ವಾರ್ಥ ಸೇವೆಯನ್ನು ಕಂಡು ಸಾರ್ವಜನಿಕರು "ದಾನ ಚಿಂತಾಮಣಿ" ಎಂದು ಕೊಂಡಾಡುತ್ತಿದ್ದು, ಇನ್ನಷ್ಟು ಸಮಾಜಮುಖಿ ಕಾರ್ಯಗಳಿಗೆ ದೇವರು ಶಕ್ತಿ ನೀಡಲಿ ಎಂದು ಹಾರೈಸುತ್ತಿದ್ದಾರೆ.

**-ಸರ್ದಾರ್ ಯಮನೂರಪ್ಪ**
ರಾಮನಗರ-ಹಗರಿಬೊಮ್ಮನಹಳ್ಳಿ.

# ವಿವಿದ ಕ್ಷೇತ್ರಗಳಲ್ಲಿ ಸಾಧನೆಗೈಯಲು ಗುಣಮಟ್ಟದ ಶಿಕ್ಷಣ ಅಗತ್ಯ

## ಅಂಜುಮನ್ ಎ ಇಸ್ಲಾಂ ಸಂಸ್ಥೆ ಶಾಲೆಯ ಎರಡನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಟೀಲ




■ವಿಜಯಸಾಕ್ಷಿ ಸುದ್ದಿ, ರೋಣ

ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆಗೈಯಲು ಗುಣಮಟ್ಟದ ಶಿಕ್ಷಣ ಅತ್ಯಂತ ಅವಶ್ಯಕ ಎಂದು ತಾಲೂಕಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ ಹೇಳಿದರು.

ಪಟ್ಟಣದ ಅಂಜುಮನ್ ಎ ಇಸ್ಲಾಂ ಸಂಸ್ಥೆಯ ರೋಣ ಪಬ್ಲಿಕ್ ಶಾಲೆಯ ಎರಡನೇ ವಾರ್ಷಿಕೋತ್ಸವ ಮತ್ತು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾಡು ಸೇರಿದಂತೆ ದೇಶದಲ್ಲಿ ಮುಸ್ಲಿಂ ಜನಾಂಗದವರು ಶಿಕ್ಷಣ ಪಡೆಯುವಲ್ಲಿ ಸ್ವಲ್ಪ ಮಟ್ಟಿಗೆ ಹಿಂದಿದ್ದಾರೆ ಎನ್ನುವುದು ವಾಸ್ತವ. ಆದರೆ ಈಗಿನ ದಿನಗಳಲ್ಲಿ ಮುಸ್ಲಿಂ ಜನಾಂಗದವರು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿರುವುದು ಸಂತಸದ ಸಂಗತಿ. ಗುಣಮಟ್ಟದ ಶಿಕ್ಷಣ ಪಡೆದಾಗ ಮಾತ್ರ ಉನ್ನತ ಹುದ್ದೆಗಳನ್ನು ಹೊಂದಲು ಸಾಧ್ಯ ಎಂಬುದನ್ನು ಅನೇಕ ಮುಸ್ಲಿಂ ಯುವಕರು ಸಾಬೀತು ಮಾಡಿದ್ದಾರೆ ಎಂದರು.

ಮುಸ್ಲಿಂ ಜನಾಂಗ ಮಹಿಳೆಯರ ಶಿಕ್ಷಣಕ್ಕೂ ಹೆಚ್ಚಿನ ಅವಕಾಶ ಕೊಟ್ಟಿದ್ದಾರೆ. ಇಂದು ರಾಜ್ಯದಲ್ಲಿ ಅನೇಕ ಮಹತ್ವದ ಹುದ್ದೆಗಳನ್ನು ಮುಸ್ಲಿಂ ಮಹಿಳೆಯರು ನಿಭಾಯಿಸುತ್ತಿದ್ದಾರೆ. ಕಾರಣ ಅವರ ಪಾಲಕರು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತಿದ್ದಾರೆ ಎನ್ನುವುದು ಅಕ್ಷರ ಸಹ ಸತ್ಯ. ಹಾಗಾಗಿ ಪಟ್ಟಣದ ಮುಸ್ಲಿಂಮರು ಕೂಡ ತಮ್ಮ ಮಕ್ಕಳಿಗೆ ಗುಣಮಟ್ಟದ ಅಕ್ಷರ ಜ್ಞಾನ ಕೊಡಿಸುವಲ್ಲಿ ಹಿಂದೆ ಸರಿಯಬಾರದು ಎಂದರು.

ಅಂಜುಮನ್ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳನ್ನು ತೆರೆದು ಬಡ ಮಕ್ಕಳಿಗೆ ಅನಕೂಲ ಕಲ್ಪಿಸಿದ್ದಾರೆ.

ಪಬ್ಲಿಕ್ ಶಾಲೆಯನ್ನು ತೆ-ರೆದು ಕೇವಲ ಎರಡು ವರ್ಷ ಮಾತ್ರ, 50 ವಿದ್ಯಾರ್ಥಿಗಳಿಂದ ಆರಂಭಗೊಂಡ ಶಾಲೆ 150 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವುದು ಮಹತ್ತರ ಸಾಧನೆಯಾಗಿದೆ ಎಂದು ಸಂಗನಗೌಡ ಪಾಟೀಲ ಹೇಳಿದರು.

> ಕಲಿಕೆ ಜೀವನದ ಬದುಕನ್ನು ಸುಧಾರಿಸಲು ಮಹತ್ತರ ಹೆಜ್ಜೆಯಾಗಿದೆ. ಸಮಾಜದ ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ರೀತಿಯಲ್ಲಿ ಸಾಧನೆಗೈದಿದ್ದಾರೆ. ಬಡವರ ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರ ತೆಗೆಯುವುದು ಸಂಸ್ಥೆಯ ಉದ್ದೇಶವಾಗಿದ್ದು, ಈ ನಿಟ್ಟಿನಲ್ಲಿ ರೋಣ ಪಬ್ಲಿಕ್ ಶಾಲೆಯನ್ನು ಆರಂಭಿಸಲಾಯಿತು.
>
> **-ಬಾವಾಸಾಬ್ ಬೆಟಗೇರಿ,**
> ಅಂಜುಮನ್ ಸಂಸ್ಥೆ ಅಧ್ಯಕ್ಷ.

ಅಂಜುಮನ್ ಸಂಸ್ಥೆ ಅಧ್ಯಕ್ಷ ಬಾವಾಸಾಬ್ ಬೆಟಗೇರಿ ಮಾತನಾಡಿ, ಶಾಲೆಯ ಪರಿಸರ ಗುಣಮಟ್ಟದಿಂದ ಕೂಡಿರಬೇಕಾದರೆ ಅಲ್ಲಿನ ಶಿಕ್ಷಣ ವ್ಯವಸ್ಥೆ ಸರಿದಾರಿಯಲ್ಲಿ ಸಾಗಬೇಕು. ಪುಟ್ಟ ಮಕ್ಕಳಿಗೆ ಅಕ್ಷರ ಜ್ಞಾನ ನೀಡುವುದು ಸುಲಭದ ಮಾತಲ್ಲ. ಮುಗ್ಧ ಮಕ್ಕಳ ಮನಸ್ಸನ್ನು ಅಕ್ಷರ ಜ್ಞಾನದತ್ತ ತರಬೇಕಾದರೆ ಶಿಕ್ಷಕರು ಸಹ ಮಗುವಿನಂತೆ ಆಗುವ ಅನಿವಾರ್ಯತೆಯನ್ನು ಹೊಂದಬೇಕಾಗುತ್ತದೆ ಅಂದಾಗ ಮಾತ್ರ ಶಿಕ್ಷಣ ಸಂಸ್ಥೆಗಳು ಬೆಳೆಯಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಪಬ್ಲಿಕ್ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು, ಸಿಬ್ಬಂದಿ ಪ್ರಾಮಾಣಿಕವಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವ ಪರಿಣಾಮ ಶಾಲೆಯ ಕೀರ್ತಿ ಹೆಚ್ಚಿಸಲು ಕಾರಣವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಸಮಿತಿ ಅಧ್ಯಕ್ಷ ಸಂಗನಗೌಡ ಪಾಟೀಲ, ಜಿಲ್ಲಾ ಕಾರಾಗೃಹದ ಅಧಿಕಾರಿಗಳಾದ ಉಮ್ಮಾ ತಸ್ಮಿಯಾ, ಡಿವಾಯ್‌ಎಸ್ಪಿ ಮರ್ತುಜಾ ಖಾದ್ರಿ ಸೇರಿದಂತೆ ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆಗೈದ ಮಹನೀಯರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕ್ಫ್ ಭೋರ್ಡ್ ಅಧ್ಯಕ್ಷ ಯೂಸುಫ್ ಇಟಗಿ, ಅಬ್ದುಲ್ ಲತೀಫ್ ಖತೀಬ್, ಖಲೀಲ್ ರಾಮದುರ್ಗ, ಶಫೀಕ್ ಮೂಗನೂರು, ಮಲೀಕ್ ಯಲಿಗಾರ್, ದಸ್ತಗೀರ ಗಡವಾಲೆ, ರಿಯಾಜ್ ಮುಲ್ಲಾ, ಅಯೂಬ್‌ಖಾನ್ ಹಾಶೀಮನವರ ಸೇರಿದಂತೆ ಅಂಜುಮನ್ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಇಂದು ಕಾಳಿಕಾ ದೇವಸ್ಥಾನದ ವರ್ಧಂತ್ಯೋತ್ಸವ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಇಲ್ಲಿನ ಪಂಚಾಕ್ಷರಿ ನಗರದಲ್ಲಿರುವ ಶ್ರೀ ಕಾಳಿಕಾ ದೇವಸ್ಥಾನದ ಎರಡನೇ ವರ್ಧಂತ್ಯೋತ್ಸವ ಇದೇ ಮಾರ್ಚ್ 31 ರಂದು ನಡೆಯಲಿದೆ.

ಅಂದು ಬೆಳಿಗ್ಗೆ 8 ಗಂಟೆಯಿಂದ ದೇವಸ್ಥಾನದಲ್ಲಿ ಶ್ರೀ ಕಾಳಿಕಾದೇವಿ, ಗಣೇಶ, ವಿಶ್ವರ್ಮ ಹಾಗೂ ನಾಗದೇವತೆಗಳಿಗೆ ಶ್ರೀ ಶಂಕರಾಚರ್ಯ ಕಡ್ಲಾಸ್ಕರ ಅವರ ಪೌರೋಹಿತ್ಯದಲ್ಲಿ ಅಭಿಷೇಕ ಮತ್ತು ದುರ್ಗಾ ಹೋಮಾದಿ ಪೂಜೆ, ಮಧ್ಯಾಹ್ನ ಒಂದು ಗಂಟೆಯಿಂದ ಮಹಾಪ್ರಸಾದ ಜರುಗುವುದು.

ಮಧ್ಯಾಹ್ನ 3:30 ರಿಂದ ಧಾರ್ಮಿಕ ಸಭೆ ಜರುಗಲಿದ್ದು, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ್ ಹೊರಟ್ಟಿ ಅವರು ವರ್ಧಂತ್ಯೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಶ್ರೀ ಕಾಳಿಕಾ ದೇವಸ್ಥಾನದ ಫೇಸ್ ಬುಕ್ ಮತ್ತು ಇನ್ಸಾಗ್ರಾಮ್ ವೆಬ್ ಸೈಟ್ ಅನಾವರಣಗೊಳಿಸಲಿದ್ದಾರೆ.

ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್. ವಿ. ಸಂಕನೂರ, ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನಮೂರ್ತಿ, ಮಾಜಿ ಮಹಾಪೌರ ರಾಮಣ್ಣ ಬಡಿಗೇರ, ಕರ್ನಾಟಕ ಜನ ಜಾಗೃತಿ ವೇದಿಕೆಯ ನಿಕಟಪೂರ್ವ ರಾಜ್ಯಾಧ್ಯಕ್ಷ ರಾಜಣ್ಣ ಕೊರವಿ, ಧಾರವಾಡ ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ವಸಂತ ಅರ್ಕಾಚಾರ, ಕಾರ್ಯದರ್ಶಿ ಹನುಮಂತ ನಾಯ್ಕ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸದಸ್ಯರುಗಳಾದ ಚಂದ್ರಶೇಖರ ಮನಗುಂಡಿ ಮತ್ತು ಶ್ರೀಮತಿ ಸುನಿತಾ ಮಾಳವದಕರ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ವಿಶ್ವಕರ್ಮ ವಿಕಾಸ ಸಮಿತಿ ಟ್ರಸ್ಟ್ ಅಧ್ಯಕ್ಷ ಸಿ.ಪಿ. ಮಾಯಾಚಾರಿ ವಹಿಸುವರು.

ಈ ಸಂದರ್ಭದಲ್ಲಿ ಟ್ರಸ್ಟಿನ ಹಿರಿಯ ಸದಸ್ಯರು ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರು ಹಾಗೂ ದಾನಿಗಳನ್ನು ಸನ್ಮಾನಿಸಲಾಗುವುದು. ಜೊತೆಗೆ ವಿವಿಧ ಕ್ರೀಡೆಗಳಲ್ಲಿ ಗೆದ್ದ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಟ್ರಸ್ಟಿನ ಅಧ್ಯಕ್ಷ ಸಿ.ಪಿ. ಮಾಯಾಚಾರಿ ತಿಳಿಸಿದ್ದಾರೆ.

# ಶ್ರದ್ಧಾಭಕ್ತಿಯಿಂದ ಪಾಮ್ ಸಂಡೆ ಆಚರಣೆ

## ಹಗರಿಬೊಮ್ಮನಹಳ್ಳಿಯಲ್ಲಿ ಕ್ರೈಸ್ತರ ಪವಿತ್ರ ವಾರಕ್ಕೆ ಚಾಲನೆ

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಯೇಸುಕ್ರಿಸ್ತರು ಜೆರುಸಲೇಂ ನಗರ ಪ್ರವೇಶಿಸಿದ ಘಟನೆಯನ್ನು ಸ್ಮರಿಸುವ "ಗರಿಗಳ ರವಿವಾರ" (ಪಾಮ್ ಸಂಡೆ) ಅನ್ನು ಹಗರಿಬೊಮ್ಮನಹಳ್ಳಿ ತಾಲೂಕು ವ್ಯಾಪ್ತಿಯಲ್ಲಿ ಕ್ರೈಸ್ತ ಬಾಂಧವರು ಶ್ರದ್ಧಾಭಕ್ತಿಯಿಂದ ಆಚರಿಸಿದರು. ಈ ಮೂಲಕ ಕ್ರೈಸ್ತರ ಪವಿತ್ರ ವಾರಕ್ಕೆ ಅಧಿಕೃತ ಚಾಲನೆ ದೊರೆಯಿತು.

ಪಟ್ಟಣದ ಎಬಿನೇಜರ್ ಚರ್ಚ್ ಹಾಗೂ ಮರಿಯಮ್ಮನಹಳ್ಳಿ ಕರ್ನಾಟಕ ಕಲ್ವರಿ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆಗಳು ನೆರವೇರಿದವು. ಭಕ್ತರು ತಾಳೆ ಗರಿಗಳನ್ನು ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಿ ಯೇಸುಕ್ರಿಸ್ತರ ಜೆರುಸಲೇಂ ಪ್ರವೇಶವನ್ನು ಸ್ಮರಿಸಿದರು.

> "ಗರಿಗಳ ರವಿವಾರ ಕೇವಲ ಹಬ್ಬವಲ್ಲ, ಯೇಸುವಿನ ತ್ಯಾಗದ ಪಥದಲ್ಲಿ ನಡೆಯುವ ಆಧ್ಯಾತ್ಮಿಕ ಆಹ್ವಾನವಾಗಿದೆ."
>
> **- ಪಾಸ್ಟರ್ ವಿಜಯ್ ಭಾಸ್ಕರ್.**

ಚರ್ಚ್ ಸಭಾಪಾಲಕರಾದ ಪಾಸ್ಟರ್ ವಿಜಯ್ ಭಾಸ್ಕರ್ ಹಾಗೂ ರೆವೆರೆಂಡ್ ಎಂ. ಜಕ್ಕಯ್ಯ ಅವರು ಪಾಮ್ ಸಂಡೆಯ ಮಹತ್ವವನ್ನು ವಿವರಿಸಿ, ಇದು ಕೇವಲ ಆಚರಣೆಯಲ್ಲ, ಯೇಸುವಿನ ತ್ಯಾಗದ ಪಥವನ್ನು ಅನುಸರಿಸುವ ಆಧ್ಯಾತ್ಮಿಕ ಆಹ್ವಾನವಾಗಿದೆ ಎಂದು ತಿಳಿಸಿದರು.


ಯೇಸುಕ್ರಿಸ್ತರು ಶಿಲುಬೆಗೆ ಏರುವ ಒಂದು ವಾರದ ಮೊದಲು ಜೆರುಸಲೇಂ ನಗರ ಪ್ರವೇಶಿಸುವಾಗ ಜನರು ತಾಳೆ ಗರಿಗಳನ್ನು ಹಾಸಿ ಸ್ವಾಗತಿಸಿದ ಹಿನ್ನೆಲೆಯಲ್ಲೇ ಈ ಆಚರಣೆ ಪ್ರತಿ ವರ್ಷ ನಡೆಯುತ್ತದೆ. ಹಗರಿಬೊಮ್ಮನಹಳ್ಳಿಯಲ್ಲಿ ವಿಶೇಷವಾಗಿ ತೆಂಗಿನ ಎಳೆ ಗರಿಗಳನ್ನು ಬಳಸುವ ಸಂಪ್ರದಾಯವಿದೆ.

ಈ ಕಾರ್ಯಕ್ರಮದಲ್ಲಿ ಎಬಿನೇಜರ್ ಚರ್ಚ್ ಕಾರ್ಯದರ್ಶಿ ಕಾವ್ಯರಾಜು, ಕೋಶಾಧಿಕಾರಿ ಪ್ರಭಾಕರ್, ಸಭಾ ಹಿರಿಯರು ಕೆ.ಕೊಟ್ರೇಶ್, ವಿಜಯಕುಮಾರ್, ನಾಗರಾಜ್, ಅರುಣಮ್ಮ ಸೇರಿದಂತೆ ಹಲವರು ಭಾಗವಹಿಸಿದ್ದರು. ಕರ್ನಾಟಕ ಕಲ್ವರಿ ಚರ್ಚ್‌ನಲ್ಲಿ ಮೇರಿ ಜಕ್ಕಯ್ಯ, ಸುಜನ, ಇವಾಂಜಲಿಸ್ಟ್ ವಿಲ್ಸನ್, ವಿಲಿಯಂ, ಸುಗುಣಮ್ಮ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ಬದುಕಿನ ವಿಕಾಸಕ್ಕೆ ಧರ್ಮವೇ ಅಡಿಪಾಯ!

## ಧರ್ಮ ಜಾಗೃತಿ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಬಾಳಿನ ಭಾಗ್ಯೋದಯಕ್ಕೆ ಆದರ್ಶ ಮೌಲ್ಯಗಳ ಪರಿಪಾಲನೆ ಬೇಕು. ಸಂಸ್ಕಾರ ಮತ್ತು ಸಚ್ಚಾರಿತ್ರ್ಯದಿಂದ ಮಾತ್ರ ಬದುಕನ್ನು ಶ್ರೀಮಂತಗೊಳಿಸಲು ಸಾಧ್ಯವಿದೆ. ಬದುಕಿನ ವಿಕಾಸಕ್ಕೆ ಧರ್ಮವೇ ಅಡಿಪಾಯ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲೂಕಿನ ಹಳ್ಯಾಳ ಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ರಥೋತ್ಸವ ಅಂಗವಾಗಿ ನಡೆದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಸತ್ಯ ಮತ್ತು ಶಾಂತಿ ಜಗದ ಎರಡು ಕಣ್ಣುಗಳು. ಜಗತ್ತನ್ನು ಕಾಣುವ ಕಣ್ಣಿನಲ್ಲಿ ನಮ್ಮನ್ನು ನಾವು ಕಾಣಲು ಸಾಧ್ಯವಾಗದು. ನಮ್ಮನ್ನು ನಾವು ಅರಿಯಲು ಗುರು ಮತ್ತು ಧರ್ಮ ಜ್ಞಾನದ ಅವಶ್ಯಕತೆಯಿದೆ ಎಂದರು.

ಧರ್ಮ, ಸಂಸ್ಕೃತಿ, ಸಭ್ಯತೆ, ಸದ್ಗುಣ ಮತ್ತು ಸಂಸ್ಕಾರ ಜನರ ನಿಜವಾದ ಆಸ್ತಿ. ಹೊರಗಿನ ಸಿರಿ ಸಂಪತ್ತು ಹೆಚ್ಚಿದಷ್ಟು ಆಂತರಿಕ ಬಡತನ ಮತ್ತು ದುರ್ಬಲತೆ ಬೆಳೆಯುತ್ತಿರುವುದು ನೋವಿನ ಸಂಗತಿಯಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ಜೀವನ ದರ್ಶನದ ಅಮೂಲ್ಯ ಆಧ್ಯಾತ್ಮಿಕ ಚಿಂತನಗಳು ಉಜ್ವಲ ಬದುಕಿಗೆ ಸ್ಫೂರ್ತಿಯಾಗಿವೆ. ವಿಜ್ಞಾನ ತಂತ್ರಜ್ಞಾನಗಳ ತೊಳಲಾಟದಲ್ಲಿ ಧರ್ಮ, ಸಂಸ್ಕೃತಿ ಮತ್ತು ಆದರ್ಶಗಳು ನಾಶಗೊಳ್ಳಬಾರದು. ಪರಮಾಚಾರ್ಯರು ಬೋಧಿಸಿದ ಧರ್ಮದ ದಶವಿಧ ಸೂತ್ರಗಳು ಸಕಲರ ಬಾಳಿಗೆ ಬಹಳಷ್ಟು ಬಲ ತಂದಿವೆ ಎಂದರು.

> ಬೆಳಗಿನ ಸಂದರ್ಭದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಂಗಲ ಮೂರ್ತಿಗೆ ವಿಶೇಷ ಪೂಜೆ ಜರುಗಿತು. ಸಂಜೆ 5 ಗಂಟೆಗೆ ಸಕಲ ಸದ್ಭಕ್ತರ ಸಮ್ಮುಖದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಥೋತ್ಸವ ಸಂಭ್ರಮದಲ್ಲಿ ಜರುಗಿತು. ಆಗಮಿಸಿದ ಭಕ್ತರಿಗೆ ಅನ್ನದಾಸೋಹ ಜರುಗಿತು.

ಸಮಾರಂಭದಲ್ಲಿ ಪಾಲ್ಗೊಂಡ ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಹೃದಯ-ಹೃದ್ಭೂಮಿಯಲ್ಲಿ ಕೃಷಿಗೈದು ಶಿವಜ್ಞಾನದ ಅರಿವನ್ನು ಉಂಟು ಮಾಡುವ ಶಕ್ತಿ ಗುರುವಿಗಿದೆ ಹೊರತು ಬೇರಾರಿಗೂ ಇರುವುದಿಲ್ಲ. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಬಾಳಿದರೆ ಜೀವನ ಉಜ್ವಲಗೊಳ್ಳುವುದೆಂದರು.


ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಈಶ ನಿರ್ಮಿತವಾದ ಈ ಪ್ರಪಂಚದಲ್ಲಿ ಇರುವುದೆಲ್ಲವೂ ಅಮೂಲ್ಯವಾಗಿವೆ. ಸತ್ಯ ಶುದ್ಧ ಕಾಯಕದಿಂದ ಬದುಕು ಬಲಗೊಳ್ಳುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಶಿವಾದ್ವೇತ ಸಿದ್ಧಾಂತ ಜನ ಮನದ ಮೇಲೆ ಪರಿಣಾಮ ಬೀರುತ್ತವೆ ಎಂದರು.

ನವಲಗುಂದ ಕ್ಷೇತ್ರದ ಶಾಸಕ ಎನ್.ಹೆಚ್. ಕೋನರೆಡ್ಡಿ, ಬಿ.ಡಿ. ನಾಗನಗೌಡ, ಗುರುನಾಥಗೌಡ ಮಾದಾಪುರ, ರಘುನಾಥಗೌಡ, ಕೆಂಪಲಿಗನಗೌಡ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

# ಎತ್ತಿನ ಮೈ ತೊಳೆಯಲು ಹೋಗಿ ಯುವಕ ಸಾವು

■ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಹಾತಲಗೇರಿ ಗ್ರಾಮದಲ್ಲಿ ಯುವಕನೊಬ್ಬ ಕೆರೆಯಲ್ಲಿ ಮುಳುಗಿ ಮೃತಪಟ್ಟ ಘಟನೆ ನಡೆದಿದೆ. ಮುತ್ತಪ್ಪ ಅಲಿಯಾಸ್ ಫಕ್ಕೀರೇಶ್ ಮುರ್ಲಾಪುರ (20) ಮೃತ ಯುವಕ ಎಂದು ಗುರುತಿಸಲಾಗಿದೆ.



ಸೋಮವಾರ ಬೆಳಿಗ್ಗೆ ಎತ್ತಿಗೆ ಮೈ ತೊಳೆಯಲು ಕೆರೆಗೆ ತೆರಳಿದ್ದ ವೇಳೆ, ಆಯಾತಪ್ಪಿ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ ಎನ್ನಲಾಗಿದೆ.

ಘಟನೆಯ ಮಾಹಿತಿ ತಿಳಿದ ಕೂಡಲೇ ಗದಗ ಗ್ರಾಮೀಣ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಕೆರೆಯಲ್ಲಿ ಮುಳುಗಿದ್ದ ಯುವಕನ ಮೃತದೇಹವನ್ನು ಹೊರತೆಗೆದರು.

ಘಟನಾ ಸ್ಥಳದಲ್ಲಿ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದ್ದು, ದುಃಖದ ವಾತಾವರಣ ನಿರ್ಮಾಣವಾಗಿತ್ತು. ಗದಗ ಗ್ರಾಮೀಣ ಠಾಣೆಯ ಹಿರಿಯ ಪೊಲೀಸ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ಗದಗ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ಮಕ್ಕಳ ದಾಖಲಾತಿಗೆ ಜಾಗೃತಿ ಅಭಿಯಾನ




■ವಿಜಯಸಾಕ್ಷಿ ಸುದ್ದಿ, ಶಿಗ್ಲಿ

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಿಂದ ದಾಖಲಾತಿ ಅಭಿಯಾನದ ಅಂಗವಾಗಿ ಗ್ರಾಮದಲ್ಲಿ ಪ್ರಭಾತ ಫೇರಿ ನಡೆಸಿ ಎಲ್‌ಕೆಜಿ, ಯುಕೆಜಿ ಮತ್ತು 1ನೇ ತರಗತಿಗೆ ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲಿಸುವಂತೆ ಜಾಗೃತಿ ಮೂಲಕ ಮನವೊಲಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ದೇವೇಂದ್ರಪ್ಪ ಕೊಪ್ಪದ, ಸದಸ್ಯರಾದ ರವಿ ಕೊರವರ, ಚಂದ್ರು ಪತ್ತಾರ, ಬಸವರಾಜ್ ಅಸುಂಡಿ, ಗಣೇಶ ನವಲೆ, ಗದಿಗೆಪ್ಪ ಮಾಗಡಿ, ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಮತ್ತು ಮಕ್ಕಳು ಪಾಲ್ಗೊಂಡಿದ್ದರು.

## ಮರಕ್ಕೆ ಬಸ್ ಡಿಕ್ಕಿ-ಚಾಲಕನ ಸಮಯಪ್ರಜ್ಞೆಯಿಂದ ತಪ್ಪಿದ ಭಾರಿ ಅನಾಹುತ!



**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಹೊಸಪೇಟೆ-ಹರಿಹರ ಮುಖ್ಯ ರಸ್ತೆಯಲ್ಲಿ ಬರುವ ಪಿಂಜಾರ ಹೆಗ್ಡಾಳ್ ಗ್ರಾಮದ ಬಳಿ ಕೆಕೆಆರ್‌ಟಿಸಿ ಬಸ್ಸೊಂದು ಮರಕ್ಕೆ ಡಿಕ್ಕಿ ಹೊಡೆದ ಘಟನೆ ಸಂಭವಿಸಿದೆ.

ಬಸ್ ಚಾಲಕನ ಸಮಯಪ್ರಜ್ಞೆಯಿಂದ ಸಂಭವಿಸಬಹುದಾದ ಭಾರಿ ಅನಾಹುತ ತಪ್ಪಿದೆ. ಬಸ್ಸಿನಲ್ಲಿ ಒಟ್ಟು 16 ಮಂದಿ ಪ್ರಯಾಣಿಕರಿದ್ದು, ಎಲ್ಲರೂ ಸುರಕ್ಷಿತರಾಗಿದ್ದಾರೆ.

ಮಾಹಿತಿಯಂತೆ, ಬಸ್ಸಿನ ಪಾಟಾ (ಪ್ಲೇಟ್ ಕಟ್) ಆಗಿರುವುದರಿಂದ ಬಸ್ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ ಎಂದು ತಿಳಿದು ಬಂದಿದೆ.

ಈ ಘಟನೆ ವೇಳೆ ಚಾಲಕ ಶಂಕರಲಿಂಗ ಹಾಗೂ ನಿರ್ವಾಹಕ ಹನುಮಂತಪ್ಪ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಸಾರಿಗೆ ಬಸ್ ಹಗರಿಬೊಮ್ಮನಹಳ್ಳಿಯಿಂದ ಹೊಸಪೇಟೆಗೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಈ ಕುರಿತು ಡಿಪೋ ಅಧಿಕಾರಿಯಾದ ಸಂತೋಷ್ ಕುಮಾರ್ ಮಾಹಿತಿ ನೀಡಿದ್ದು, ಪ್ರಯಾಣಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿರುವುದಾಗಿ ತಿಳಿಸಿದ್ದಾರೆ.

# "ಕುಟುಂಬದಲ್ಲಿ ಶಾಂತಿ ಇದ್ದರೆ ಮಹಿಳೆಯ ಬದುಕು ಸಂತೃಪ್ತಿಯಾಗುತ್ತದೆ"

**ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದಲ್ಲಿ ವಾರ್ಷಿಕೋತ್ಸವ ಮತ್ತು ಮಹಿಳಾ ದಿನಾಚರಣೆಯಲ್ಲಿ ವೀಣಾ ಹೇಮಂತಗೌಡ**

**■ವಿಜಯಸಾಕ್ಷಿ ಸುದ್ದಿ, ಗದಗ**

ಪ್ರಸ್ತುತ ದಿನಮಾನದಲ್ಲಿ ಮಹಿಳೆ ಸುಖಕರ ಜೀವನಕ್ಕೆ ಬೇಕಾದ ಸಕಲ ಸೌಲಭ್ಯಗಳನ್ನು ಪಡೆದಿದ್ದರೂ ತೃಪ್ತಿಕರ ಬದುಕು ಅವಳದಾಗಿರುವುದಿಲ್ಲ. ಹುಟ್ಟಿನಿಂದ ಹಿಡಿದು ಶಿಕ್ಷಣ, ವಿವಾಹ, ಯೌವನ, ವೃದ್ಧಾಪ್ಯದವರೆಗೂ ಮಹಿಳೆ ಒಂದಿಲ್ಲೊಂದು ಕೌಟುಂಬಿಕ ಮತ್ತು ಸಾಮಾಜಿಕ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಸಾಧಿಸಬೇಕಾದುದನ್ನು ಸಾಧಿಸದೆ ನೊಂದ ಮನದಿಂದ ಅನಿವಾರ್ಯತೆಯ ಜೀವನ ಸಾಗಿಸುತ್ತಿದ್ದಾಳೆ ಎಂದು ಮುಂಡರಗಿಯ ಚೈತನ್ಯ ಶಿಕ್ಷಣ ಸಂಸ್ಥೆಯ ನಿರ್ದೇಶಕಿಯಾದ ವೀಣಾ ಹೇಮಂತಗೌಡ ಪಾಟೀಲ ಹೇಳಿದರು.

ಎಸ್.ವೈ.ಬಿ.ಎಂ.ಎಸ್. ಯೋಗ ಪಾಠ ಶಾಲೆ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ, ಸಿದ್ಧಲಿಂಗ ನಗರ ಗದಗ ಸಂಸ್ಥೆಯ 17ನೇ ವಾರ್ಷಿಕೋತ್ಸವ ಸಮಾರಂಭ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಗಳಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು, ಮಹಿಳೆಯರು ಈ ಎಲ್ಲಾ ಸಮಸ್ಯೆಗಳಿಂದ ದೂರವಾಗಬೇಕಾದರೆ ಮಹಿಳೆ ಸಾಮಾಜಿಕ ಸಂಘಟನೆ, ಸತ್ಸಂಗ, ಸಭೆ, ಸಮಾರಂಭ, ಸಮಾಜ ಸೇವೆಗಳಲ್ಲಿ ಪಾಲ್ಗೊಳ್ಳಬೇಕು. ಇದರಿಂದ ಮಹಿಳೆಯ ಮನಸ್ಸು ಪ್ರಫುಲ್ಲಗೊಂಡು ಮನೋ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ ಎಂದು ಹೇಳಿದರು.

ಮಹಿಳೆಯ ಮನೋ ದೈಹಿಕ ಹಾಗೂ ಇನ್ನಿತರೆ ತೊಂದರೆಗಳ ನಿವಾರಣೆಗೆ ಯೋಗ ಅತ್ಯುತ್ತಮ ಪರಿಹಾರವಾಗಿದೆ. ಮಹಿಳೆ ತನ್ನ ಗೃಹ ಕಾರ್ಯಗಳ ಜೊತೆಗೆ ಪ್ರತಿದಿನ ಬೆಳಿಗ್ಗೆ ಅರ್ಧಗಂಟೆ ಯೋಗ ಸಾಧನೆಗೆ ಮೀಸಲಿರಿಸಿದರೆ ಬದುಕು ಸುಂದರವಾಗುತ್ತದೆ. ಸ್ವತಃ ಯೋಗ ಸಾಧನೆಯಿಂದ ಕಂಡು ಅನುಭವಿದ ಅನಿಸಿಕೆಗಳನ್ನು ತಮಗೆ ತಿಳಿಸಿರುವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕುರ್ತಕೋಟಿ ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷೆ ಸರೋಜಾ ಬೂದಪ್ಪ ಅವರು, ಮಹಿಳೆ ಕುಟುಂಬ ಮತ್ತು ಸಮಾಜ ಜೀವನವನ್ನು ಒಂದು ರಥದ ಎರಡು ಗಾಲಿಗಳಂತೆ ಸಮನಾಗಿ ನಡೆಸಿದರೆ ಬದುಕು ಹಸನಾಗಿರುವುದೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಎಸ್. ಕೆ. ನಾಲತ್ವಾಡಮಠ, ಡಾ. ಎಂ. ವಿ. ಐಹೊಳ್ಳಿ, ಶಿವನಗೌಡ ಗೌಡರ, ಸಂಗನಬಸಪ್ಪ ಆನೆಹೊಸೂರ, ಬಸವರಾಜ ತೋಟಿಗೇರ, ಡಾ. ಎನ್. ಎಸ್. ಹದ್ಲಿ, ಪ್ರಕಾಶ ಗಾಣಿಗೇರ, ಪಾರ್ವತಿ ಭೂಮಾ, ವಿದ್ಯಾ ಕೊಳ್ಳಿ, ಪ್ರಭಾವತಿ ಕುಲಕರ್ಣಿ, ತುಳಸಮ್ಮ ಮಳಲಿ, ಜಯಶ್ರೀ ಪುರದ, ವಿದ್ಯಾ ಸ್ವಾಮಿ, ಇಂದಿರಾ ಪರಡ್ಡಿ, ಸರೋಜಾ ತೋಟಿಗೇರ, ಗಂಗಮ್ಮ ಹಿಟಬುತ್ತಿ, ಕವಿತಾ ಗಾಳಪ್ಪನವರ, ಗಂಗಮ್ಮ ಹುಚ್ಚಣ್ಣವರ, ರತ್ನಾ ಪುರವಂತರ, ಛಾಯಾ ಹಿರೇಮಠ, ಗಿರಿಜಾ ಅಂಗಡಿ, ರತ್ನಾ ಗಾಣಿಗೇರ, ಶಾರದಾ ಹೊಸಮನಿ, ಶಾಲಿನಿ ಅಕ್ಕಿ, ಸುಮಾ ಸುರೇಬಾನ ಹಾಗೂ ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಸದಸ್ಯೆಯರು ಭಾಗವಹಿಸಿದ್ದರು.



"ಮಹಿಳೆಯರು ಸಾಮಾಜಿಕ ಸಂಘಟನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ಅವರ ವೈಯಕ್ತಿಕ ಹಾಗೂ ಸಮೂಹ ಅಭಿವೃದ್ಧಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಮಹಿಳೆ ಜಾಗೃತಳಾದಾಗ ಒಂದು ಕುಟುಂಬ ಜಾಗೃತಗೊಳ್ಳುತ್ತದೆ, ಕುಟುಂಬಗಳ ಜಾಗೃತಿಯಿಂದ ಸಮಗ್ರ ಸಮಾಜದಲ್ಲಿಯೂ ಸಕಾರಾತ್ಮಕ ಪರಿವರ್ತನೆ ಸಾಧ್ಯವಾಗುತ್ತದೆ"-

**- ವಿಜಯಲಕ್ಷ್ಮೀ ಆನೆಹೊಸೂರು,**
ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರದ ಅಧ್ಯಕ್ಷೆ.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದು ಹುಬ್ಬಳ್ಳಿ ನಗರ ಪಾಲಿಕೆಯಿಂದ 'ಕಿತ್ತೂರ ಚನ್ನಮ್ಮ' ಪ್ರಶಸ್ತಿ ಪುರಸ್ಕೃತರು ಮತ್ತು ಜೈಂಟ್ಸ್ ಗ್ರೂಪ್ ಆಫ್ ಫೆಡರೇಶನ್‌ನ ಯುನಿಟ್ ಡೈರೆಕ್ಟರ್ ಹಾಗೂ ವಿಭಾಗೀಯ ನಿರ್ದೇಶಕರಾದ ಜಯಲಕ್ಷ್ಮೀ ರುದ್ರಗೌಡ ಉಮಚಗಿ ಮತ್ತು ಇತ್ತೀಚೆಗೆ ಕಪ್ಪತ್ತಗಿರಿ ಫೌಂಡೇಶನ್ ಮುಂಡರಗಿ ಸಂಸ್ಥೆ ನೀಡಿದ "ಯೋಗ ರತ್ನ" ಪ್ರಶಸ್ತಿ ಪಡೆದ ನಿತ್ಯಂ ಯೋಗ ಕೇಂದ್ರದ ಸಂಚಾಲಕಿ, ಶಿಕ್ಷಕಿಯರಾದ ಸುಮಂಗಲಾ ನಾಗೇಶ ಹದ್ಲಿ ಅವರುಗಳನ್ನು ಗೌರವಿಸಲಾಯಿತು.

# ಅಂಬೇಡ್ಕರ್ ವೃತ್ತ ನಿರ್ಮಾಣಕ್ಕೆ ಚಾಲನೆ

**ಶಾಸಕ ನೇಮಿರಾಜ ನಾಯ್ಕರಿಂದ ಭೂಮಿ ಪೂಜೆ**



**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ದೇಶಕ್ಕೆ ಮಹತ್ತರ ಸಂವಿಧಾನವನ್ನು ನೀಡಿದ ಮಹಾನ್ ವ್ಯಕ್ತಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವೃತ್ತ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡುವುದು ನನ್ನ ಜೀವನದ ಮಹತ್ವದ ಕನಸು ನನಸಾದ ಕ್ಷಣ ಎಂದು ಶಾಸಕ ನೇಮಿರಾಜ ನಾಯ್ಕ ಹೇಳಿದರು.

ಪಟ್ಟಣದ ರಾಮನಗರ ಬಸ್ ನಿಲ್ದಾಣದ ಹತ್ತಿರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 35 ಲಕ್ಷ ರೂ. ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 15 ಲಕ್ಷ ರೂ. ಸೇರಿದಂತೆ ಒಟ್ಟು 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ಹಾಗೂ ಪುತ್ಥಳಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. "ನಾನು ಎರಡನೇ ಬಾರಿ ಶಾಸಕನಾಗಿ ವಿಧಾನಸೌಧಕ್ಕೆ ಹೋಗಿದ್ದರೆ ಅದು ಅಂಬೇಡ್ಕರ್ ನೀಡಿದ ಸಂವಿಧಾನದ ಫಲ. ಅಂತಹ ಮಹಾನ್ ವ್ಯಕ್ತಿಯ ಪುತ್ಥಳಿ ಹಾಗೂ ವೃತ್ತ ನಿರ್ಮಾಣ ಮಾಡುವ ಅವಕಾಶ ಸಿಕ್ಕಿರುವುದು ನನ್ನ ಜೀವನದ ಸಾರ್ಥಕತೆ" ಎಂದು ಹೇಳಿದರು.

ಡಾ. ಬಿ.ಆರ್. ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗದ್ದಿಕೇರಿ ದೊಡ್ಡ ಬಸಪ್ಪ ಮಾತನಾಡಿ, ಅಂಬೇಡ್ಕರ್ ಭವನ ಹಾಗೂ ಸರ್ಕಲ್ ನಿರ್ಮಾಣಕ್ಕಾಗಿ ಕಳೆದ 30 ವರ್ಷಗಳಿಂದ ಹೋರಾಟ ನಡೆಸಿದ್ದೇವೆ. ಈಗ ಶಾಸಕರು ಈ ಕಾರ್ಯಕ್ಕೆ ಚಾಲನೆ ನೀಡಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಕನ್ನಿಹಳ್ಳಿ ಚಂದ್ರಶೇಖರ್, ಹೋಟೆಲ್ ಸಿದ್ದರಾಜು, ಪಾಂಡುನಾಯ್ಕ, ಮೇದಾರ್ ಕೊಟ್ರೇಶ್, ನಿವೃತ್ತ ಶಿಕ್ಷಕರಾದ ಮಾಯಪ್ಪ, ಕೊಟ್ರಪ್ಪ, ನಿವೃತ್ತ ಎಎಸ್‌ಐ ಸಿದ್ದಲಿಂಗಪ್ಪ, ನಿವೃತ್ತ ಸಬ್‌ರಿಜಿಸ್ಟರ್ ರುದ್ರಪ್ಪ ಸೇರಿದಂತೆ ಅನೇಕ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

"ಅಂಬೇಡ್ಕರ್ ಅವರ ಸಂವಿಧಾನದ ಫಲದಿಂದಲೇ ನಾನು ಶಾಸಕನಾಗಿದ್ದೇನೆ ಅವರ ವೃತ್ತ ನಿರ್ಮಾಣ ನನ್ನ ಜೀವನದ ಸಾರ್ಥಕತೆ."


**- ನೇಮಿರಾಜ ನಾಯ್ಕ,** ಶಾಸಕರು.

# ಅರಿತು ಬಾಳಿದರೆ ಸುಖ ಶಾಂತಿ

**ಹಣ್ಣೆಮಠದ ಶ್ರೀ ಶಿವಾನಂದ ನೂತನ ಗುರು ನಿವಾಸ ಉದ್ಘಾಟನೆ ಹಾಗೂ ಗಿರಿಜಾಕಲ್ಯಾಣೋತ್ಸವದಲ್ಲಿ ರಂಭಾಪುರಿ ಶ್ರೀಗಳು**

"ನೆಮ್ಮದಿಯ ಬದುಕಿಗಾಗಿ ಧರ್ಮದ ಆಚರಣೆ ಅವಶ್ಯ. ಶಿಕ್ಷಣದ ಜೊತೆಗೆ ಸಂಸ್ಕಾರ ಬೆಳೆದು ಬಂದಾಗ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಸಾಧ್ಯ. ಹಣ್ಣೆಮಠ ಧರ್ಮ ಕಾರ್ಯದ ಜೊತೆಗೆ ಸಾಮಾಜಿಕ ಕಾರ್ಯಗಳಿಗೂ ಕೈ ಜೋಡಿಸಿರುವುದು ಹೆಮ್ಮೆಯ ಸಂಗತಿ.

**- ಡಿ.ಎಸ್. ಸುರೇಶ,** ಮಾಜಿ ಶಾಸಕ



**■ವಿಜಯಸಾಕ್ಷಿ ಸುದ್ದಿ, ಅಜ್ಜಂಪುರ**

ಬದುಕಿನ ಉತ್ಕರ್ಷತೆ ಮತ್ತು ಶ್ರೇಯಸ್ಸು ಧರ್ಮಾಚರಣೆಯಲ್ಲಿದೆ. ಮನಸ್ಸು ವಿಕಾಸಗೊಳ್ಳಬೇಕು, ಹೃದಯ ಹಸನಗೊಳ್ಳಬೇಕು. ಭಾವನೆಗಳು ವಿಕಾರಗೊಳ್ಳದೇ ವಿಕಾಸಗೊಳ್ಳಬೇಕು. ಜನರಲ್ಲಿ ಅರಿವು, ಪ್ರಜ್ಞೆ ಜಾಗೃತಗೊಳ್ಳಬೇಕು. ಯಥಾರ್ಥ ಮನುಷ್ಯ ಅರಿತು ಬಾಳಿದರೆ ಜೀವನದಲ್ಲಿ ಸುಖ ಶಾಂತಿ ಪ್ರಾಪ್ತವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಹಣ್ಣೆಮಠದ ಶ್ರೀ ಶಿವಾನಂದ ನೂತನ ಗುರು ನಿವಾಸ ಉದ್ಘಾಟನೆ ಹಾಗೂ ಗಿರಿಜಾಕಲ್ಯಾಣೋತ್ಸವ ಅಂಗವಾಗಿ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಸುಖದ ಬದುಕಿಗೆ ಪ್ರಯತ್ನ ಮತ್ತು ಸಾಧನೆ ಅಗತ್ಯ. ಬದುಕು ವಿಕಾಸಗೊಳ್ಳಲು ಆಧ್ಯಾತ್ಮಿಕ ಅರಿವು ಬೇಕು. ನಡೆ-ನುಡಿ, ಮನಸ್ಸಿನ ಸಕ್ರಿಯ ಪರಿಪಾಠವೇ ನಿಜವಾದ ಆಧ್ಯಾತ್ಮ. ಕೆಲವರ ಬದುಕು ಸುಖಮಯವಾಗಿರುತ್ತಿದ್ದು, ಇನ್ನು ಕೆಲವರದು ದುಃಖಮಯವಾಗಿರುತ್ತದೆ. ಕೆಲವರ ಜೀವನ ಸಂಘರ್ಷದ ಮಧ್ಯೆ ಸಾಗುತ್ತದೆ, ಕೆಲವರ ಬದುಕು ಹೆಚ್ಚು ಚಿಂತನೆಗಳಿಂದ ತುಂಬಿರುತ್ತದೆ. ಹೃದಯವಂತಿಕೆ ಇಲ್ಲದೇ ಬುದ್ಧಿವಂತಿಕೆ ಎಷ್ಟೇ ಇದ್ದರೂ ಪ್ರಯೋಜನವಿಲ್ಲ. ಬುದ್ಧಿಗಿಂತ ಹೃದಯ ಶ್ರೀಮಂತಿಕೆ ಬಹಳ ಮುಖ್ಯ ಎಂದು ಹೇಳಿದರು.


ವೀರಶೈವ ಧರ್ಮ ಮತ್ತು ಸಂಸ್ಕೃತಿಯಲ್ಲಿ ಜ್ಞಾನ ಕ್ರಿಯೆಗೆ ಅತ್ಯಂತ ಮಹತ್ವದ ಸ್ಥಾನವಿದ್ದು, ಸಾಮಾಜಿಕ ಸಂವೇದನಾಶೀಲ ಅರಿವನ್ನು ಜನರಲ್ಲಿ ಜಾಗೃತಗೊಳಿಸುವುದರಲ್ಲಿ ಧರ್ಮ ಪ್ರಮುಖ ಪಾತ್ರ ವಹಿಸುತ್ತದೆ. ಇಂತಹ ಮಾರ್ಗದರ್ಶನದ ಅಂಗವಾಗಿ, ಹಣ್ಣೆಮಠದಲ್ಲಿ ಹಿಂದಿನ ಲಿಂ. ಶಿವಾನಂದ ಶಿವಾಚಾರ್ಯರ ನಾಮಾಂಕಿತದಲ್ಲಿ ಶ್ರೀ ಶಿವಾನಂದ ನಿವಾಸವನ್ನು ನಿರ್ಮಾಣ ಮಾಡಿರುವುದು ಸ್ಥಳೀಯರು ಮತ್ತು ಭಕ್ತರಿಗೆ ಸಂತೋಷವನ್ನು ತಂದಿದೆ ಎಂದರು.

ಹಣ್ಣೆ ಹಿರೇಮಠದ ಮರುಳಸಿದ್ಧ ಪಂಡಿತಾರಾಧ್ಯ ಶಿವಾಚಾರ್ಯರು ಮಾತನಾಡಿ, "ಪರಿಶುದ್ಧ ಮನಸ್ಸು ಭಗವಂತನ ದರ್ಶನಕ್ಕೆ ಹೆಬ್ಬಾಗಿಲಾಗಿದೆ. ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಕಾರಣವು ಮನುಷ್ಯನ ಮನಸ್ಸೇ. ನಿರಂತರ ಪ್ರಯತ್ನ ಮತ್ತು ಸಾಧನೆಯ ಮೂಲಕ ಜೀವನದಲ್ಲಿ ಶ್ರೇಯಸ್ಸನ್ನು ಪಡೆಯಬಹುದು. ಮನುಷ್ಯನು ದ್ವೇಷವನ್ನು ತೊರೆದರೆ ಮಾತ್ರ ಸುಖ ಮತ್ತು ಸಂತಸ ಹೂವು ಅರಳುತ್ತದೆ ಎಂದರು.

ಪರಿಶುದ್ಧ ಮನಸ್ಸು ಭಗವಂತನ ದರ್ಶನಕ್ಕೆ ಹೆಬ್ಬಾಗಿಲು. ಒಳ್ಳೆಯದಕ್ಕೂ ಕೆಟ್ಟದ್ದಕ್ಕೂ ಮನುಷ್ಯನ ಮನಸ್ಸೇ ಮೂಲ ಕಾರಣ. ನಿರಂತರ ಪ್ರಯತ್ನ ಮತ್ತು ಸಾಧನೆಯಿಂದ ಶ್ರೇಯಸ್ಸು ಕಾಣಬಹುದು. ಮನುಷ್ಯ ಜೀವನದಲ್ಲಿ ದ್ವೇಷ ಕಳೆದುಕೊಂಡಿದ್ದರೆ ಸುಖ-ಸಂತಸದ ಹೂವು ಅರಳುವುದಿಲ್ಲ. ಲಿಂ. ಶ್ರೀ ಶಿವಾನಂದ ಶಿವಾಚಾರ್ಯರ ನಾಮಾಂಕಿತದಲ್ಲಿ ಗುರು ನಿವಾಸ ನಿರ್ಮಾಣಗೊಂಡುದು ಸಂತೃಪ್ತಿ ತಂದಿದೆ. ಇದಕ್ಕೆ ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಮತ್ತು ಭಕ್ತರ ಸಹಕಾರ ಕಾರಣವಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಹುಲಿಕೆರೆ ವಿರೂಪಾಕ್ಷಲಿಂಗ ಶಿವಾಚಾರ್ಯರು, ಎಡೆಯೂರು ರೇಣುಕ ಶಿವಾಚಾರ್ಯರು, ತರೀಕೆರೆ ಜಗದೀಶ್ವರ ಶಿವಾಚಾರ್ಯರು, ಹುಣಸಘಟ್ಟ ಗುರುಮೂರ್ತಿ ಶಿವಾಚಾರ್ಯರು, ಬಿಳಕಿ ರಾಚೋಟೇಶ್ವರ ಶಿವಾಚಾರ್ಯರು, ನಂದಿಪುರ ನಂದೀಶ್ವರ ಶಿವಾಚಾರ್ಯರು, ಬೀರೂರು ರುದ್ರಮುನಿ ಶಿವಾಚಾರ್ಯರು, ತಾವರೆಕೆರೆ ಡಾ. ಅಭಿನವ ಸಿದ್ಧಲಿಂಗ ಶಿವಾಚಾರ್ಯರು ಪಾಲ್ಗೊಂಡಿದ್ದರು.

# ಹಿಂದಿ ಅಂಕಗಳ ವ್ಯವಸ್ಥೆ ರದ್ದು ಬೇಡ

**ವಿದ್ಯಾರ್ಥಿ-ಶಿಕ್ಷಕರ ಹಿತಕ್ಕಾಗಿ ತ್ರಿಭಾಷಾ ಸೂತ್ರ ಕಾಯ್ದುಕೊಳ್ಳಿ: ಸಭಾಪತಿ ಬಸವರಾಜ ಹೊರಟ್ಟಿ ಮನವಿ**



**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ರಾಜ್ಯದಲ್ಲಿ ತ್ರಿಭಾಷಾ ಸೂತ್ರವನ್ನು ಮುಂದುವರಿಸಿ, ಹಿಂದಿ ವಿಷಯದಲ್ಲಿ ಅಂಕಗಳ ವ್ಯವಸ್ಥೆಯನ್ನು ಯಥಾವತ್ತಾಗಿ ಉಳಿಸಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಭಾಷೆ ಮನುಷ್ಯನ ಭಾವನೆಗಳ ಅಭಿವ್ಯಕ್ತಿಗೆ ಪ್ರಮುಖ ಮಾಧ್ಯಮವಾಗಿದ್ದು, ಬಹುಭಾಷೆಗಳ ಕಲಿಕೆಯಿಂದ ಮೆದುಳಿನ ಬೆಳವಣಿಗೆ ಹೆಚ್ಚುತ್ತದೆ ಎಂದು ಮನೋವಿಜ್ಞಾನವು ಸೂಚಿಸುತ್ತದೆ. ಈ ಹಿನ್ನಲೆಯಲ್ಲಿ 1961ರಿಂದ ಜಾರಿಯಲ್ಲಿರುವ ತ್ರಿಭಾಷಾ ಸೂತ್ರವು ರಾಷ್ಟ್ರದ ಏಕತೆ ಹಾಗೂ ಭಾಷಾ ವೈವಿಧ್ಯತೆಯನ್ನು ಉತ್ತೇಜಿಸುತ್ತದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ತ್ರಿಭಾಷಾ ಸೂತ್ರದಿಂದ ವಿದ್ಯಾರ್ಥಿಗಳಿಗೆ ವಿವಿಧ ಭಾಷೆಗಳಲ್ಲಿ ಸಂವಹನ ಸಾಮರ್ಥ್ಯ ಹೆಚ್ಚುವುದರ ಜೊತೆಗೆ, ಭವಿಷ್ಯದಲ್ಲಿ ಅನ್ಯ ರಾಜ್ಯಗಳಲ್ಲಿ ಉದ್ಯೋಗ ಮತ್ತು ವಿದ್ಯಾಭ್ಯಾಸಕ್ಕೆ ಅವಕಾಶಗಳು ವಿಸ್ತರಿಸುತ್ತವೆ.

ದ್ವಿಭಾಷಾ ನೀತಿ ಜಾರಿಗೆ ಬಂದಲ್ಲಿ ಸಂವಹನ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಲಾಗಿದೆ.

ಹಿಂದಿ ವಿಷಯದಲ್ಲಿ ಅಂಕಗಳನ್ನು ತೆಗೆದುಹಾಕಿ ಗ್ರೇಡಿಂಗ್ ವ್ಯವಸ್ಥೆ ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದರ ಜೊತೆಗೆ, ರಾಜ್ಯದ ಸುಮಾರು 15,000ಕ್ಕೂ ಹೆಚ್ಚು ಹಿಂದಿ ಶಿಕ್ಷಕರ ಉದ್ಯೋಗ ಭದ್ರತೆಗೆ ಧಕ್ಕೆ ಉಂಟಾಗಲಿದೆ ಎಂದು ಬಸವರಾಜ ಹೊರಟ್ಟಿ ಆತಂಕ ವ್ಯಕ್ತಪಡಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಹಿಂದಿ ವಿಷಯದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿರುವುದು ಹಾಗೂ ಒಟ್ಟು ಫಲಿತಾಂಶ ಸುಧಾರಣೆಗೆ ಸಹಕಾರಿಯಾಗಿರುವುದನ್ನೂ ಉಲ್ಲೇಖಿಸಿದ್ದಾರೆ.

ಎನ್‌ಎಸ್‌ಕ್ಯೂಎಫ್ ವಿಷಯವನ್ನು ಹಿಂದಿಯ ಬದಲಿಗೆ ಜಾರಿಗೊಳಿಸುವ ಬದಲು ಪ್ರತ್ಯೇಕ ವಿಷಯವಾಗಿ ಬೋಧನೆ ಮಾಡಲು ಅವಕಾಶ ನೀಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಹೀಗಾಗಿ, ತ್ರಿಭಾಷಾ ಸೂತ್ರವನ್ನು ಮುಂದುವರಿಸಿ, ಹಿಂದಿ ವಿಷಯದಲ್ಲಿ ಅಂಕಗಳ ಪದ್ಧತಿಯನ್ನು ಯಥಾಸ್ಥಿತಿಯಲ್ಲಿ ಉಳಿಸುವಂತೆ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಮಾಡಿದ್ದಾರೆ.

"ತ್ರಿಭಾಷಾ ಸೂತ್ರವು ವಿದ್ಯಾರ್ಥಿಗಳ ಭವಿಷ್ಯ ಮತ್ತು ರಾಷ್ಟ್ರ ಏಕತೆಗೆ ಅವಶ್ಯಕ - ಅದನ್ನು ಮುಂದುವರಿಸಬೇಕು."

**- ಬಸವರಾಜ ಹೊರಟ್ಟಿ, ಸಭಾಪತಿಗಳು.**

# ಅವ್ವಾ ಸೇವಾ ಪ್ರತಿಷ್ಠಾನಕ್ಕೆ ರಾಜ್ಯ ಮಟ್ಟದ ಪ್ರಶಸ್ತಿ

**■ವಿಜಯಸಾಕ್ಷಿ ಸುದ್ದಿ, ಧಾರವಾಡ**

.ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಮಹತ್ವದ ಸೇವೆಯನ್ನು ಗುರುತಿಸಿ ಪಟ್ಟಣದ "ಅವ್ವಾ ಸೇವಾ ಪ್ರತಿಷ್ಠಾನ"ಕ್ಕೆ ರಾಜ್ಯ ಮಟ್ಟದ ಪ್ರಶಸ್ತಿ ಘೋಷಿಸಲಾಗಿದೆ.

ಕರ್ನಾಟಕ ಭಾರತ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕ ಧಾರವಾಡ ಹಾಗೂ ಪರಿಸರ ಪ್ರೇಮ ತಂಡ ಧಾರವಾಡ ವತಿಯಿಂದ ಪ್ರತಿ ವರ್ಷ ನೀಡಲಾಗುವ ಈ ಪ್ರಶಸ್ತಿ, ದಿ. ಸಾವಂತ್ರಮ್ಮ ಬಸವಂತಪ್ಪ ಮಟ್ಟಿ ಅವರ ಸ್ಮರಣಾರ್ಥ ಸ್ಥಾಪನೆಯಾಗಿದೆ. ಈ ವರ್ಷದ ಅತ್ಯುತ್ತಮ ಸೇವಾ ಸಂಘ ಪ್ರಶಸ್ತಿಗೆ ಅವ್ವಾ ಸೇವಾ ಪ್ರತಿಷ್ಠಾನ ಆಯ್ಕೆಯಾಗಿದ್ದು, ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಮಟ್ಟಿ ಅವರಿಗೆ ಈ ಗೌರವ ಲಭಿಸುತ್ತಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಎಪ್ರಿಲ್ 5, 2026ರಂದು ಧಾರವಾಡದ ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ಜರುಗಲಿದೆ.



# ರಾಜ್ಯ ಸಹ ಕಾರ್ಯದರ್ಶಿಯಾಗಿ ಮಂಜುನಾಥ ಮಟ್ಟಿ ಆಯ್ಕೆ

**■ವಿಜಯಸಾಕ್ಷಿ ಸುದ್ದಿ, ಮುಳಗುಂದ**



ಪಟ್ಟಣದ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ, ಶಿಕ್ಷಕ, ಸಾಹಿತಿ ಕೊಪ್ಪಳ ಜಿಲ್ಲಾ ತಳಕಲ್ ಕ್ಲಸ್ಟರ್ ಕ್ರಿಯಾಶೀಲ ಸಿಆರ್‌ಪಿ ಮಂಜುನಾಥ ಮಟ್ಟಿ ಇವರನ್ನು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಿಷತ್‌ನ ರಾಜ್ಯ ಸಹ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಗಿದೆ.

# ರಂಭಾಪುರಿ ಜಗದ್ಗುರುಗಳ ಎಪ್ರಿಲ್ ಪ್ರವಾಸದ ವಿವರ

**■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು**

ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರ ಎಪ್ರಿಲ್ ತಿಂಗಳ ಪ್ರವಾಸ ಕಾರ್ಯಕ್ರಮವನ್ನು ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಎಚ್. ಬಾಳನಗೌಡ್ರ ಪ್ರಕಟಿಸಿದ್ದಾರೆ.

ದಿ. 2ರಂದು ಪೌರ್ಣಿಮೆಯ ನಿತ್ಯ, ಬಾಳೆಹೊನ್ನೂರು ಪೀಠದಲ್ಲಿ ಭಕ್ತರಿಗೆ ದರ್ಶನ-ಆಶೀರ್ವಾದ ನೀಡಲಾಗುವುದು. 4ರಂದು ಬೆಳಿಗ್ಗೆ 11 ಗಂಟೆಗೆ ಚನ್ನಗಿರಿಯಲ್ಲಿ ನೂತನ ಹಿರೇಮಠದ ಕಟ್ಟಡ ಉದ್ಘಾಟನೆ ಮತ್ತು ಧಾರ್ಮಿಕ ಸಮಾರಂಭ, ಸಂಜೆ 5 ಗಂಟೆಗೆ ಶಿವಮೊಗ್ಗ ತಾಲ್ಲೂಕಿನ ವೀರಣ್ಣನ ಬೆನವಳ್ಳಿಯಲ್ಲಿ ಧರ್ಮ ಸಮಾರಂಭ ನಡೆಯಲಿದೆ.

5-8ರಂದು ಜಗಳೂರು, ಅಜ್ಜಂಪುರ, ತರೀಕೆರೆ, ಮತ್ತು ಶಿಗ್ಗಾಂವಿ ತಾಲ್ಲೂಕುಗಳಲ್ಲಿ ಜಯಂತಿ ಮತ್ತು ಇಷ್ಟಲಿಂಗ ಮಹಾಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.



9-11ರಂದು ಸಿಂದಗಿ, ಆಲಮೇಲು ತಾಲ್ಲೂಕುಗಳಲ್ಲಿ ಪುರಾಣ ಪ್ರವಚನ, ಕಳಸಾರೋಹಣ ಸಮಾರಂಭಗಳು ಮತ್ತು ದೇವಸ್ಥಾನ ಉದ್ಘಾಟನೆಗಳು, 12-13ರಂದು ಮಹಾರಾಷ್ಟ್ರದ ವೇಳಾಪುರದಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಸದಾಶಿವ ಶಿವಾಚಾರ್ಯರ ಪಟ್ಟಾಧಿಕಾರ ವರ್ಧಂತಿ ಸಮಾರಂಭ ನಡೆಯಲಿದೆ.

15-18ರಂದು ಸುರಪುರ, ಚನ್ನಗಿರಿ, ಶಿಕಾರಿಪುರ ತಾಲ್ಲೂಕುಗಳಲ್ಲಿ ನೂತನ ಶಾಲಾ ಕಟ್ಟಡ ಉದ್ಘಾಟನೆ, ಸಾಮೂಹಿಕ ವಿವಾಹ ಮತ್ತು ಇಷ್ಟಲಿಂಗ ಮಹಾಪೂಜೆ ನಡೆಸಲಾಗುವುದು.

19-29ರಂದು ದಾವಣಗೆರೆ, ಬೈಲಹೊಂಗಲ, ಮುಂಡರಗಿ, ಹಗರಿಬೊಮ್ಮನಹಳ್ಳಿ, ಗೌರಿಬಿದನೂರು, ಬೆಂಗಳೂರು, ಹಾವೇರಿ, ಹುಬ್ಬಳ್ಳಿ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ಶ್ರದ್ಧಾ ಭಾವದಿಂದ ದೇವಸ್ಥಾನ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ, ಪುರ ಪ್ರವೇಶ ಮತ್ತು ಧರ್ಮ ಸಮಾರಂಭಗಳು ನಡೆಯಲಿವೆ.

ಪೀಠದವರು ಧರ್ಮಾಭಿಮಾನಿಗಳನ್ನು ಶ್ರೀ ರಂಭಾಪುರಿ ಜಗದ್ಗುರುಗಳವರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆಶೀರ್ವಾದ ಪಡೆಯುವಂತೆ ವಿನಂತಿಸಿದ್ದಾರೆ.

# ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಮುಂದಾಗಬೇಕು

▶▶ಮೊದಲನೇ ಪುಟದಿಂದ

ಮನೆಯಲ್ಲಿ ಪೋಷಕರು, ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು, ಉಪನ್ಯಾಸಕರು, ಧರ್ಮಗುರುಗಳು, ವೈದ್ಯರ ಸಂಘಟನೆಗಳು, ಸಾಮಾಜಿಕ ಸಂಘಟನೆಗಳು ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಗದಗ ಐಎಂಎ ಅಧ್ಯಕ್ಷ ಡಾ.ಶ್ರೀಧರ ವ್ಹಿ.ಕುರಡಗಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಐಎಂಎ ಸೇರಿದಂತೆ ಇತರ ಸಾಮಾಜಿಕ ಸಂಘಟನೆಗಳ ಸಹಕಾರದೊಂದಿಗೆ ಈ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಜಾಥಾದಲ್ಲಿ ತೋಂಟದಾರ್ಯ ಜಾತ್ರಾ ಸಮಿತಿಯ ಪದಾಧಿಕಾರಿಗಳು, ಐಎಂಎ, ನಿಮಾ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಪದಾಧಿಕಾರಿಗಳು, ಅಲೋಪತಿಕ್ ಹಾಗೂ ಆಯುರ್ವೆದ ಚಿಕಿತ್ಸಾ ಪದ್ಧತಿಯ ಹಿರಿಯ ತಜ್ಞ ವೈದ್ಯರು, ಡಿಜಿಎಂ ಆಯುರ್ವೆದ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ನಿಡಗುಂದಿಯಲ್ಲಿ ಮನೆಗಳ್ಳತನ: ಹಣ, ಬೆಳ್ಳಿ, ಬಂಗಾರದ ವಡವೆ ಕಳುವು



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಬೇಸಿಗೆ ಎಂದು ಮನೆಯವರೆಲ್ಲರೂ ಹೊರಗೆ ಮಲಗಿದ್ದ ವೇಳೆ ಮನೆಗೆ ನುಗ್ಗಿದ ಕಳ್ಳರು ಅಂದಾಜು 4 ಲಕ್ಷದ 28 ಸಾವಿರ ರೂಪಾಯಿ ಮೌಲ್ಯದ ಬೆಳ್ಳಿ, ಬಂಗಾರದ ಒಡವೆಗಳು, ಹಣ ಕಳ್ಳತನ ಮಾಡಿ ಪರಾರಿಯಾದ ಘಟನೆ ಸಮೀಪದ ನಿಡಗುಂದಿ ಗ್ರಾಮದಲ್ಲಿ ನಡೆದಿದೆ.

ನರೇಗಲ್ಲ ಸಮೀಪದ ನಿಡಗುಂದಿ ಗ್ರಾಮದ ಈರಪ್ಪ ಬಸಪ್ಪ ಗಡಾದವರ ನಿವಾಸದಲ್ಲಿ ಈ ಘಟನೆ ನಡೆದಿದೆ. ವಿಪರೀತ ಸೆಕೆ ಇದ್ದದ್ದರಿಂದ ಮನೆಯವರು ಮನೆಯ ಹೊರಭಾಗದಲ್ಲಿ ನಿದ್ರೆಯಲ್ಲಿದ್ದರು. ಇದೇ ಸಮಯವನ್ನು ಉಪಯೋಗಿಸಿಕೊಂಡ ಕಳ್ಳರು ಟ್ರಂಕ್ ಸಮೇತ ಕಳ್ಳತನ ಮಾಡಿ ಬಳಿಕ ಅದರಲ್ಲಿದ್ದ ಬಂಗಾರ, ಬೆಳ್ಳಿ ಮತ್ತು ಹಣವನ್ನು ದೋಚಿ ಪರಾರಿಯಾಗಿದ್ದಾರೆ. ಮನೆಯವರು ಬೆಳಿಗ್ಗೆ ಎದ್ದು ನೋಡಿದಾಗ ವಿಷಯ ಬೆಳಕಿಗೆ ಬಂದಿದೆ.

ಹಣ, ಬೆಳ್ಳಿ, ಬಂಗಾರದ ಒಡವೆಗಳನ್ನು ಇಟ್ಟ ಟ್ರಂಕ್ ಕಾಣದಾದಾಗ ಗಾಬರಿಗೊಂಡಿದ್ದು, ನರೇಗಲ್ಲ ಪೋಲೀಸ್‌ಠಾಣೆಗೆ ದೂರು ನೀಡಿದ್ದಾರೆ. .ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ನರೇಗಲ್ಲ ಪಿಎಸ್‌ಐ ಐಶ್ವರ್ಯ ನಾಗರಾಳ್ ಹಾಗೂ ಅವರ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

### ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಡಾ.ಆನಂದ ಪಾಂಡುರಂಗಿ

# ಯುವ ಜನಾಂಗ ರೀಲ್ಸ್ ಹಿರೋಗಳಾಗದೆ ರಿಯಲ್ ಹಿರೋಗಳಾಗಲಿ

■ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ಯುವ ಜನಾಂಗ ಸಾಮಾಜಿಕ ಜಾಲತಾಣಕ್ಕೆ ಆಕರ್ಷಿತರಾಗಿ ತಮ್ಮ ಜೀವನ, ಸಾಧನೆಯನ್ನು ಅನ್ಯಮಾರ್ಗಕ್ಕೆ ಸಾಗಿಸುತ್ತಿದ್ದಾರೆ. ರಿಯಲ್ ಹಿರೋ ಆಗಬೇಕಾದವರು ರೀಲ್ಸ್-ರೀಲ್ ಹಿರೋ ಆಗುತ್ತಿರುವುದು ದೊಡ್ಡ ದುರಂತ ಎಂದು ಖ್ಯಾತ ಮನೋರೋಗ ತಜ್ಞ ಡಾ.ಆನಂದ ಪಾಂಡುರಂಗಿ ಹೇಳಿದರು.

ಗದುಗಿನ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಜ.ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ, ಗದಗ ಐಎಂಎ, ನಿಮಾ, ಆಯುರ್ವೇದಿಕ ಕಾಲೇಜ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ರಕ್ತದಾನ ಶಿಬಿರ, ಅಲೋಪತಿಕ ಹಾಗೂ ಆಯುರ್ವೇದ ವೈದ್ಯರಿಂದ ಜರುಗಿದ ಉಚಿತ ಆರೋಗ್ಯ ತಪಾಸಣಾ ಶಿಬಿರದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ರೀಲ್ಸ, ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ವ್ಯಾಟ್‌ಆ್ಯಪ್ ಮುಂತಾದ ಸಾಮಾಜಿಕ ಮಾಧ್ಯಮಗಳಿಗೆ ಆಕರ್ಷಿತರಾಗಿರುವ ಯುವಕ ಯುವತಿಯರು ವಾಸ್ತವಿಕ ಬದುಕನ್ನೇ ಮರೆಯುತ್ತಿದ್ದಾರೆ. ಓದಬೇಕಿರುವ ವಯಸ್ಸಿನಲ್ಲಿ ಓದುವುದನ್ನು ಬಿಟ್ಟು ಉಳಿದೆಲ್ಲವನ್ನೂ ಚಾಚೂ ತಪ್ಪದೇ ಮಾಡುತ್ತಿರುವುದು ಒಳ್ಳೆ ಬೆಳವಣಿಗೆಯ ಲಕ್ಷಣವಲ್ಲ. ಹದಿಹರೆಯದ ಯುವತಿಯರು ಕಾಲೇಜ್ ಕಲಿಯಲು ದೂರದ ಪಟ್ಟಣಗಳಲ್ಲಿ ಸಹಪಾಠಿಗಳ ಸಹವಾಸದಿಂದ ಹಲವಾರು ದುಶ್ಚಟಗಳಿಗೆ ಬಲಿಯಾಗುತ್ತಿರುವ ಆತಂಕದ ಸಂಗತಿಯಾಗಿದೆ ಎಂದರು.

ಇತ್ತೀಚೆಗೆ ನಡೆದ ರಾಷ್ಟ್ರೀಯ ಆರೋಗ್ಯ ಸಮೀಕ್ಷೆಯ ಪ್ರಕಾರ, ಸುಮಾರು 13 ಶೇಕಡಾ ಯುವಜನತೆ ಮದ್ಯಪಾನ, ಧೂಮಪಾನ, ಆನ್‌ಲೈನ್ ಚಟುವಟಿಕೆಗಳು ಹಾಗೂ ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆಯಿಂದ ತಮ್ಮ ಆರೋಗ್ಯ ಹಾಗೂ ಆರ್ಥಿಕ ಸ್ಥಿತಿಯನ್ನು ಹಾನಿಗೊಳ ಪಡಿಸಿಕೊಳ್ಳುತ್ತಿದ್ದಾರೆ ಎಂಬ ಗಂಭೀರ ಅಂಶ ಬಹಿರಂಗವಾಗಿದೆ. ಇದೀಗಲೇ ನನ್ನ ಬಳಿ ನೂರಾರು ಪಾಲಕರು ತಮ್ಮ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ವಿವಿಧ ಆರೋಗ್ಯ ಸಮಸ್ಯೆಗಳ ಪರಿಶೀಲನೆಗಾಗಿ ಸಂಪರ್ಕಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ದುಶ್ಚಟಗಳಿಗೆ ಬಲಿಯಾಗುತ್ತಿರುವ ಯುವ ಜನಾಂಗ ಸೋಷಿಯಲ್ ಮೀಡಿಯಾಕ್ಕೆ ಬಲಿಯಾಗುತ್ತಿರುವುದನ್ನೂ ಸಹ ದುಶ್ಚಟವೆಂದೇ ಪರಿಗಣಿಸಬೇಕಿದೆ. ಯುವಕರು ಮೊಬೈಲ್, ಇಂಟರ್‌ನೆಟ್ ಬಳಕೆಯಿಂದ ಕಣ್ಣು, ಆರೋಗ್ಯ, ಹಣ ಕಳೆದುಕೊಳ್ಳುತ್ತಿದ್ದಾರೆ.




> "ಇಂದು ಸಮಾಜದ ಸ್ವಾಸ್ಥ್ಯ ಹಾಗೂ ಜನರ ಆರೋಗ್ಯದ ಸ್ವಾಸ್ಥ್ಯ ಕಾಪಾಡುವುದು ಅಗತ್ಯವಿದೆ. ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಸಾಥ್ ನೀಡಬೇಕು"
> – ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು.

ಆದ್ದರಿಂದ ಪಾಲಕರು ತಮ್ಮ ಮಕ್ಕಳ ಮೊಬೈಲ್ ಬಳಕೆ ಮೇಲೆ ನಿಗಾ ಇಡಲೇಬೇಕು. ಅವರೇನು ಮಾಡುತ್ತಿದ್ದಾರೆ? ಏನು ನೋಡುತ್ತಿದ್ದಾರೆ, ಯಾವ ಸೈಟ್ ನೋಡುತ್ತಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು ಎಂದು ಹೇಳಿದರು.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಹಿರಿಯ ವೈದ್ಯ ಗದಗ ಐಎಂಎ ನಿಕಟಪೂರ್ವ ಅಧ್ಯಕ್ಷ ಡಾ.ಪ್ಯಾರಾಅಲಿ ನೂರಾನಿ ಮಾತನಾಡಿ, ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ ಆರೋಗ್ಯ ಜಾಗೃತಿ ಕಾರ್ಯಕ್ರಮ ಎಂದಿಗಿಂತ ಇಂದು ಅವಶ್ಯವಿದ್ದು ಉತ್ತಮ ಪ್ರತಿಕ್ರಿಯೆ ದೊ-ರೆತಿದೆ. ಮನುಷ್ಯನಿಗೆ ಒಳ್ಳೆಯ ಚಟಗಳಿರಬೇಕು, ದುಶ್ಚಟಗಳಲ್ಲ ಎಂದು ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿ ಗದಗ ಐಎಂಎ ಅಧ್ಯಕ್ಷ ಡಾ.ಶ್ರೀಧರ ವ್ಹಿ.ಕುರಡಗಿ ಮಾತನಾಡಿ, ಗದಗ ಐಎಂಎ ವೈದ್ಯರು ಸೇರಿದಂತೆ ಅಲೋಪತಿಕ್ ಹಾಗೂ ಆಯುರ್ವೇದ ಚಿಕಿತ್ಸಾ ಪದ್ಧತಿಯ ಹಿರಿಯ ತಜ್ಞ ವೈದ್ಯರು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ನಡೆಸುವ ಮೂಲಕ ಸಮಾಜ ಸ್ವಾಸ್ಥ್ಯ ಕಾಪಾಡಲು ಸಹಕಾರ ನೀಡಿದ್ದು ಅಭಿನಂದನೀಯ ಎಂದರು.

ಕಾರ್ಯಕ್ರಮದಲ್ಲಿ ಡಾ.ಎಸ್.ಬಿ.ಶೆಟ್ಟರ, ಡಾ.ಧನೇಶ ದೇಸಾಯಿ, ಡಾ.ಜಯಕುಮಾರ ಬ್ಯಾಳಿ, ಡಾ.ಸಂದೀಪ ಕವಳಿಕಾಯಿ, ಡಾ.ಹಿರೇಮಠ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ರಾಜು ವೇರ್ಣೆಕರ ಉಪಸ್ಥಿತರಿದ್ದರು.

### 'ದರ್ವೇಶಿ' ಕಾವ್ಯ ಕೃತಿ ಜನಾರ್ಪಣೆ - ಸಮಾಜದ ನೋವುಗಳನ್ನು ಕಾವ್ಯದಲ್ಲಿ ಮೂಡಿಸಿದ ಕವಿ ಎ.ಎಸ್. ಮಕಾನದಾರ

# ವರ್ತಮಾನದ ತಲ್ಲಣಗಳಿಗೆ ಕವಿ ಸ್ಪಂದನೆ ಅಗತ್ಯ




■ವಿಜಯಸಾಕ್ಷಿ ಸುದ್ದಿ, ಹೂವಿನ ಹಡಗಲಿ

ಬಡತನ, ಹಸಿವು, ನೋವು ಹಾಗೂ ಸಂಕಷ್ಟಗಳಿಂದ ಕೂಡಿದ ಇಂದಿನ ಕಾಲಘಟ್ಟದಲ್ಲಿ ಕವಿ ಸಮಾಜದ ತಲ್ಲಣಗಳಿಗೆ ಸ್ಪಂದಿಸುವುದು ಅಗತ್ಯ ಎಂದು ಹಿರಿಯ ಕವಯತ್ರಿ ಹಾಗೂ ಹಾವೇರಿ ಜಿಲ್ಲಾ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯೆ ಡಾ. ಪುಷ್ಪಾ ಶಲವಡಿಮಠ ಅಭಿಪ್ರಾಯಪಟ್ಟರು.

ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ಸಿಂಚನ ಪ್ರಕಾಶನ ಹಾಗೂ ಮೇ ಸಾಹಿತ್ಯ ಮೇಳ ಬಳಗದ ಸಹಯೋಗದಲ್ಲಿ ಆಯೋಜಿಸಿದ್ದ ಗದುಗಿನ ಕವಿ ಎ.ಎಸ್. ಮಕಾನದಾರ ಅವರ 'ದರ್ವೇಶಿ' ಪದ್ಯ ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶರಣರು ಮತ್ತು ಸೂಫಿ ಸಂತರ ಸೌಹಾರ್ದತೆ ಹಾಗೂ ಸಮಾನತೆಯ ಮೌಲ್ಯಗಳನ್ನು ಕವಿ ಸರಳ ಪದ್ಯಗಳಲ್ಲಿ ಅನಾವರಣಗೊಳಿಸಿರುವುದು ವಿಶೇಷ. ಸಮಾಜದ ಸಾಮಾನ್ಯ ಜನರ ಕಷ್ಟ-ನೋವುಗಳನ್ನು ಕವಿ ಮನಸಾರೆ ಅನುಭವಿಸಿ ಕಾವ್ಯ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ದರ್ವೇಶಿಗಳು ಸರಳ, ತ್ಯಾಗಮಯ ಜೀವನ ನಡೆಸುವ ಮೂಲಕ ಉದಾತ್ತ ಮೌಲ್ಯಗಳನ್ನು ಸಾರುವವರಾಗಿದ್ದು, ಅಂತಹ ಜೀವನಶೈಲಿಯನ್ನು ಕವಿ ವಿಶಿಷ್ಟವಾಗಿ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ ಎಂದರು.

> "ಸಮಾಜದ ನೋವುಗಳಿಗೆ ಕವಿ ಸ್ಪಂದಿಸಿದಾಗಲೇ ಸಾಹಿತ್ಯ ಜೀವಂತವಾಗುತ್ತದೆ."
> – ಡಾ. ಪುಷ್ಪಾ ಶಲವಡಿಮಠ

ಅಸಮಾನತೆ, ಭ್ರಷ್ಟಾಚಾರ ಮತ್ತು ಯುದ್ಧಭೀತಿಯ ನಡುವೆ 'ದರ್ವೇಶಿ' ಕೃತಿಯ ಕವಿತೆಗಳು ಮಾನವೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಇಸ್ಮಾಯಿಲ್ ಎಲಿಗಾರ್ ಕೃತಿಯನ್ನು ಜನಾರ್ಪಣೆ ಮಾಡಿದರು. ಕವಿ ಎ.ಎಸ್. ಮಕಾನದಾರ ಮಾತನಾಡಿ, ತಮ್ಮ ಕವಿತೆಗಳು ಬಳ್ಳಾರಿ ಕೃಷ್ಣದೇವರಾಯ ವಿಶ್ವವಿದ್ಯಾಲಯ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಪಠ್ಯಕ್ಕೆ ಆಯ್ಕೆಯಾಗಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತಿ ತೋ. ಮ. ಶಂಕ್ರಯ್ಯ ವಹಿಸಿದ್ದರು. ಕವಿ ರಾಮಪ್ಪ ಕೋಟಿಹಾಳ, ಸಿಂಚನ ಪ್ರಕಾಶನದ ಸವಿತಾ ಅಂಗಡಿ, ಗ್ರಂಥಾಲಯಾಧಿಕಾರಿ ಬಿ. ನಾರಾಯಣ್ ದಾಸ್, ಸೋಮಲಿಂಗ ಬೇಡರ ಆಲೂರ, ಹುರಕಡ್ಲಿ ಶಿವಕುಮಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಪತ್ರಕರ್ತ ಎಂ. ದಯಾನಂದ, ನಯನಾ ಅಂಗಡಿ ಹಾಗೂ ನಾಗರಾಜ್ ಮಲ್ಕಿಒಡೆಯರ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಇದೇ ವೇಳೆ ವಿವಿಧ ಪ್ರಕಾಶನಗಳ ಪುಸ್ತಕ ಪ್ರದರ್ಶನ ಹಾಗೂ ಮಾರಾಟವೂ ನಡೆಯಿತು.

# ಮಹಾವೀರ ಜಯಂತಿ ಸಂಭ್ರಮ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಜೈನ ಧರ್ಮ ಮತ್ತು ತತ್ವಶಾಸ್ತ್ರವು ಅನಾದಿ ಕಾಲದಿಂದಲೂ ಹರಿಯುತ್ತಿದೆ. ಪ್ರತಿ ಯುಗದಲ್ಲಿ ಕ್ರಮವಾಗಿ ಒಂದರಿಂದ ಇಪ್ಪತ್ತನಾಲ್ಕು ತೀರ್ಥಂಕರರು ಭಾರತದ ಈ ಪವಿತ್ರ ಭೂಮಿಗೆ ಇಳಿದು ದೈವಿಕ ಧರ್ಮವನ್ನು ಘೋಷಿಸಿದ್ದಾರೆ ಎಂದು ಮುಖ್ಯ ಶಿಕ್ಷಕ ಸಿ.ಕೆ. ಕೇಸರಿ ಹೇಳಿದರು.

ಬೂದಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ಮಹಾವೀರ ಜಯಂತ್ಯುತ್ಸವದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಪ್ರಸ್ತುತ ಯುಗದಲ್ಲಿ, ಭಗವಾನ್ ಶ್ರೀ ವೃಷಭದೇವನಿಂದ ಭಗವಾನ್ ಮಹಾವೀರ ಪೂರ್ಣಗೊಂಡಿದ್ದಾರೆ. ಕೊನೆಯ ತೀರ್ಥಂಕರರಾದ ಭಗವಾನ್ ಮಹಾವೀರ ಪ್ರಭುಗಳು ಕ್ರಿ.ಪೂ. 599ರಲ್ಲಿ ಚೈತ್ರ ಶುಕ್ಲ ತ್ರಯೋದಶಿಯ ಪವಿತ್ರ ದಿನದಂದು ಜನಿಸಿದರು. ಈ ಶುಭ ಸಂದರ್ಭವನ್ನು ಪ್ರಪಂಚದಾದ್ಯಂತ ಮಹಾವೀರ ಜನ್ಮ ಕಲ್ಯಾಣಕ್ ಎಂದು ಭಕ್ತಿ ಮತ್ತು ಸಂತೋಷದಿಂದ ಆಚರಿಸಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಅತಿಥಿ ಶಿಕ್ಷಕಿಯರಾದ ದೀಪಾ ಪೂಜಾರ, ಸರಸ್ವತಿ ಪೂಜಾರ, ದೀಪಾ ತುಕ್ಕೂಜಿ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



### ಮಹಾವೀರ ಜಯಂತಿಯಲ್ಲಿ ಶಾಂತಿ, ಅಹಿಂಸೆ ಸಂದೇಶ

# ಮಹಾವೀರರ ತತ್ವಗಳು ಜಗತ್ತಿನ ಸಂಕಷ್ಟಗಳಿಗೆ ಪರಿಹಾರ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಜಗತ್ತಿನಾದ್ಯಂತ ಯುದ್ಧ, ಘರ್ಷಣೆ ಹಾಗೂ ರಕ್ತಪಾತ ಹೆಚ್ಚುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಭಗವಾನ್ ಮಹಾವೀರರ ಸತ್ಯ, ಶಾಂತಿ ಮತ್ತು ಅಹಿಂಸೆಯ ತತ್ವಗಳು ಅತ್ಯಂತ ಪ್ರಸ್ತುತವಾಗಿದ್ದು, ಅವುಗಳನ್ನು ಅನುಸರಿಸುವುದು ಅವಶ್ಯಕ ಎಂದು ಖ್ಯಾತ ಸಾಹಿತಿ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಜೈನ ಶಾಸ್ತ್ರ ಅಧ್ಯಯನ ಪೀಠದ ಸಂಯೋಜಕರಾದ ಡಾ. ಜಿನದತ್ತ ಹಡಗಲಿ ಅಭಿಪ್ರಾಯಪಟ್ಟರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಲಕ್ಷ್ಮೇಶ್ವರದ ವತಿಯಿಂದ ಎಲ್.ಆರ್. ಮಲಸಮುದ್ರ ಅವರ ಸ್ವಗೃಹದಲ್ಲಿ ಹಮ್ಮಿಕೊಂಡ "ಮಾಸದ ಮಾತು" ಕಾರ್ಯಕ್ರಮ ಸರಣಿಯ 31ನೇ ಕಾರ್ಯಕ್ರಮದಲ್ಲಿ "ಭಗವಾನ್ ಮಹಾವೀರ ಜಯಂತಿ" ಕುರಿತು ಉಪನ್ಯಾಸ ನೀಡುತ್ತಾ ಅವರು ಮಾತನಾಡಿದರು.

ಭಗವಾನ್ ಮಹಾವೀರರು ಶಾಂತಿ, ತ್ಯಾಗ, ಅಹಿಂಸೆ ಹಾಗೂ ಭಾತೃತ್ವದ ಸಂದೇಶವನ್ನು ಜಗತ್ತಿಗೆ ನೀಡಿ, ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.


ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಿಂತಕ ಎಲ್. ಆರ್. ಮಲಸಮುದ್ರ ಅವರು, "ಯುದ್ಧವಿಲ್ಲದೆ ಜಗತ್ತು ಗೆದ್ದ ಮಹಾಪುರುಷ ಮಹಾವೀರರ ತತ್ವಗಳು ಇಂದಿನ ಕಾಲಘಟ್ಟಕ್ಕೆ ಅತ್ಯಂತ ಸೂಕ್ತ" ಎಂದು ಹೇಳಿದರು.

> "ಯುದ್ಧ ಮತ್ತು ಹಿಂಸೆಯಿಂದ ಬಳಲುತ್ತಿರುವ ಜಗತ್ತಿಗೆ ಮಹಾವೀರರ ಅಹಿಂಸೆ ಮತ್ತು ಶಾಂತಿ ತತ್ವಗಳೇ ಶಾಶ್ವತ ಪರಿಹಾರ."
> – ಡಾ. ಜಿನದತ್ತ ಹಡಗಲಿ.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಕಲಚೇತನ ನೌಕರರ ಸಂಘದ ಗೌರವಾಧ್ಯಕ್ಷ ಬಿ.ಎಂ. ಕುಂಬಾರ ಅವರು, "ಅಹಿಂಸಾ ಪರಮೋ ಧರ್ಮಃ ಎಂಬ ಸಂದೇಶದ ಮೂಲಕ ಮಹಾವೀರರು ಜಗತ್ತಿಗೆ ಶಾಂತಿಯ ದಾರಿ ತೋರಿಸಿದ್ದಾರೆ" ಎಂದು ಅಭಿಪ್ರಾಯಪಟ್ಟರು.

ಹಿರಿಯ ವಕೀಲರಾದ ಎ.ಬಿ. ಪಾಟೀಲ ಹಾಗೂ ಅನಂತರಾಜ ಮಿಣಜಗಿ ಮಾತನಾಡಿ, ಮಹಾವೀರರ ಅಪರಿಗ್ರಹ ಹಾಗೂ ಅನೇಕಾಂತವಾದ ತತ್ವಗಳು ಮನುಷ್ಯನ ಜೀವನದ ಸಮಸ್ಯೆಗಳಿಗೆ ಪರಿಹಾರವಾಗಬಲ್ಲವು ಎಂದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಈಶ್ವರ ಮೆಡ್ಲೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ದಿಗಂಬರ ಜೈನ ಸಮಾಜದ ಅಧ್ಯಕ್ಷ ಸುರೇಂದ್ರ ಗೌಡ ಪಾಟೀಲ, ಏನ್.ಓ. ಹಡಗಲಿ, ಎ.ಎಂ. ಮಠದ, ಬಸಣ್ಣ ಬೆಟಗೇರಿ, ಸಿ.ಜಿ. ಹಿರೇಮಠ, ಎನ್.ಎಸ್. ಗೊರವರ, ಮುರಳೀಧರ ಹುಬ್ಬಳ್ಳಿ, ಆರ್.ಸಿ. ಪಾಟೀಲ, ಸಂಗಮೇಶ ನವಲಗುಂದ, ಮಹಾವೀರಗೌಡ್ರು ಪಾಟೀಲ, ಮಂಜುನಾಥ ಗೊರವರ, ಬಸವರಾಜ ಯರಗುಪ್ಪಿ, ಡಿ.ಎನ್. ದೊಡ್ಡಮನಿ, ಆರ್.ಎಸ್. ಪಾಟೀಲ, ಉಮೇಶ ನೇಕಾರ, ಚಂದ್ರಶೇಖರ ವಡಕಣ್ಣವರ, ಎನ್.ಎಸ್. ಬಂಕಾಪುರ, ಎಸ್.ವಿ. ಕನೋಜ, ಅಜ್ಜಪ್ಪಶೆಟ್ರ, ಈರಣ್ಣ ಅಕ್ಕೂರ, ನಾಗರಾಜ ಮಜ್ಜಿಗುಡ್ಡ, ಐ.ಎ. ಬಳಿಗಾರ, ಶಂಕರ ಶಿಳ್ಳಿನ, ಎನ್.ಪಿ. ಪ್ಯಾಟಿಗೌಡ್ರ, ವಿನಯ್ ಪಾಟೀಲ, ಭೂಪಾಲ್ ಗೋಂಗಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶ್ರಾವಕಿಯರಾದ ಸಾವಿತ್ರಮ್ಮ ಲಕ್ಷ್ಮಣ ಮಲಸಮುದ್ರ, ಶಾಂತಾ ಮಹಾವೀರಗೌಡ್ರು ಪಾಟೀಲ, ಸೌಮ್ಯ ಪಂಡಿತ ಹಾಗೂ ವನಮಾಲಾ ಪಾಟೀಲ ಅವರು ಭಗವಾನ್ ಮಹಾವೀರರ ಗಾನಾಂಜಲಿ ಕಾರ್ಯಕ್ರಮ ನಡೆಸಿಕೊಟ್ಟರು. ಕು. ಸಪ್ತಮಿ ಮಂಜುನಾಥ ಗೊರವರ ಸಿತಾರ್ ವಾದನ ನೀಡಿದರು. ಕಾರ್ಯಕ್ರಮವನ್ನು ಈರಣ್ಣ ಗಾಣಿಗೇರ ಹಾಗೂ ಎಸ್.ಬಿ. ಅಣ್ಣಿಗೇರಿ ನಿರೂಪಿಸಿದರು.



**ಲಕ್ಷ್ಮೇಶ್ವರ:** ಸವಣೂರ ರಸ್ತೆಯ ಶ್ರೀ ತಿರುಪತಿ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರೀರಾಮ ನವಮಿ ನಿಮಿತ್ತ ವೆಂಕಟೇಶ್ವರನಿಗೆ ವಿಶೇಷ ಪೂಜೆ, ತೊಟ್ಟಿಲ ಕಾರ್ಯಕ್ರಮವನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು.

# ಮಹಾವೀರ ಜಯಂತಿ ಭಕ್ತಿಭಾವದಿಂದ ಆಚರಣೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಅಹಿಂಸಾ ಪರಮೋ ಧರ್ಮ ಹಾಗೂ "ಬದುಕು ಬದುಕಲು ಬಿಡು" ಎಂಬ ಶಾಶ್ವತ ಸಂದೇಶವನ್ನು ನೀಡಿದ ಭಗವಾನ್ ಮಹಾವೀರರ ಜಯಂತ್ಯುತ್ಸವವನ್ನು ಪಟ್ಟಣದಲ್ಲಿ ಜೈನ ಧರ್ಮೀಯರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ನೂತನ ಮಹಾವೀರರ ಮೂರ್ತಿ ಅನಾವರಣ ಹಾಗೂ ಪೂಜೆ ನೆರವೇರಿಸಿ 2625ನೇ ಜನ್ಮ ಕಲ್ಯಾಣಕ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಜೈನ ಸಮಾಜದ ಅಧ್ಯಕ್ಷ ಭರತರಾಜ ಬರಿಗಾಲಿ ಅವರು, ಭಗವಾನ್ ಮಹಾವೀರರು ಸತ್ಯ, ಅಹಿಂಸೆ, ಕಳ್ಳತನವಿಲ್ಲದ ಜೀವನ, ಪವಿತ್ರತೆ ಹಾಗೂ ಸಂಯಮದ ಮಾರ್ಗವನ್ನು ಜಗತ್ತಿಗೆ ಬೋಧಿಸಿ ಮಾನವಕುಲಕ್ಕೆ ಜೀವನ್ಮುಕ್ತಿಯ ದಾರಿ ತೋರಿಸಿದ್ದಾರೆ ಎಂದು ಹೇಳಿದರು.

ಗ್ರೇಡ್-2 ತಹಸೀಲ್ದಾರ್ ಮಂಜುನಾಥ ಅಮಾಸಿ ಮಾತನಾಡಿ, ಮಹಾವೀರರ ಮೌಲಿಕ ತತ್ವಗಳು ಸಾರ್ವಕಾಲಿಕವಾಗಿದ್ದು, ಯುವಜನತೆ ಅವುಗಳನ್ನು ಅರ್ಥೈಸಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಸಂಜೆ ಪಟ್ಟಣದ ಅನಂತನಾಥ ಬಸದಿ ಭಗವಾನ್ ಮಹಾವೀರರ ಭಾವಚಿತ್ರದ ಮೆರವಣಿಗೆ ಆರಂಭವಾಗಿ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಶಂಖ ಬಸದಿ ತಲುಪಿತು. ಈ ವೇಳೆ ಶ್ರಾವಕ-ಶ್ರಾವಕಿಯರು ಭಕ್ತಿ ಗೀತೆಗಳನ್ನು ಹಾಡುತ್ತಾ ಮೆರವಣಿಗೆಯಲ್ಲಿ ಪಾಲ್ಗೊಂಡರು.

ಬೆಳಿಗ್ಗೆ ಶಂಖ ಬಸದಿ ಮತ್ತು ಅನಂತನಾಥ ಬಸದಿಯಲ್ಲಿ ತೊಟ್ಟಿಲೋತ್ಸವ ಹಾಗೂ 24 ತೀರ್ಥಂಕರರ ನಾಮ ಸ್ಮರಣೆ ನೆರವೇರಿತು. ಜೈನ ಸಮಾಜದ ವತಿಯಿಂದ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಾಲು ಮತ್ತು ಹಣ್ಣುಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಮ್ಮೇದ ಗೋಗಿ, ಸಂತೋಷ ಗೋಗಿ, ವೈಭವ ಗೋಗಿ, ಸುಕೇನ್ ಗೋಗಿ, ನಂದಕುಮಾರ್ ಪಾಟೀಲ, ಭರತ್ ಪಾಟೀಲ, ಮಹಾವೀರ ಪಂಡಿತ, ಸನ್ಮತಿ ಗೋಗಿ, ಪ್ರಮೋದ ಘೋಂಗಡಿ, ಆಕಾಶ ಗೋಗಿ, ಪ್ರಜ್ವಲ್ ಕಾಟಗಲ್, ವೃಷಭ ಬರಿಗಾಲಿ, ಇಂದ್ರಜೀತ ಒಣಕುದರಿ, ಆದಿನಾಥ ಘೋಂಗಡಿ, ಯಶಪಾಲ್ ಗೋಗಿ, ಅನಂತರಾಜ ಮಿಣಜಗಿ ಸೇರಿದಂತೆ ಜೈನ ಸಮಾಜದ ಅನೇಕ ಶ್ರಾವಕ-ಶ್ರಾವಕಿಯರು ಭಾಗವಹಿಸಿದ್ದರು.



# ಸೋಮೇಶ್ವರ ದೇವಸ್ಥಾನದಲ್ಲಿ ಮಹಿಳಾ ದಿನಾಚರಣೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶ್ರೀ ಸೋಮೇಶ್ವರ ದೇವಸ್ಥಾನದ ಭಕ್ತರ ಸೇವಾ ಟ್ರಸ್ಟ್ ವತಿಯಿಂದ ಭಾನುವಾರ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ಉಡಿ ತುಂಬುವ ಶಾಸ್ತ್ರ ಮಾಡಲಾಯಿತು. ಈ ವೇಳೆ ಹಿರಿಯ ಸಾಹಿತಿ ಲಲಿತಕ್ಕ ಕೆರಿಮನಿ ಅವರನ್ನು ಸನ್ಮಾನಿಸಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಗುರಣ್ಣ ಪಾಟೀಲ ಕುಲಕರ್ಣಿ ಸೇರಿ ಸದಸ್ಯರು, ಮಹಿಳೆಯರು ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka